# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

Scan For Digital Colourful Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com

ಸಂಪುಟ:01 • ಸಂಚಿಕೆ:256 • ನೋಂದಣಿ ನಂ.:KARKAN27911 • ವಿಜಯನಗರ • 07.03.2024 • ಗುರುವಾರ • ಪುಟ:04 • ಬೆಲೆ:2
Volume:01 • Issue:256 • Reg.No:KARKAN27911 • VIJAYANAGARA • 07.03.2024 • Thursday • Page:04 • Rs:2


## ಶ್ರೀಕರಿ ಆಸ್ಪತ್ರೆವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ಇಂದು

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಶ್ರೀಕರಿ ಆಸ್ಪತ್ರೆವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಾ.7 ರಂದು ಬೆಳಿಗ್ಗೆ 10.30ಕ್ಕೆ ನಗರದ ಶ್ರೀಕರಿ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ.



ಮುಖ್ಯ ಅತಿಥಿಗಳಾದಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಚಾಲನೆ ನೀಡಲಿದ್ದಾರೆ. ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್., ಶ್ರೀ ತಾಯಮ್ಮ ಶಕ್ತಿ ಸಂಘದ ನಿರ್ದೇಶಕಿ ಕವಿತಾ ಈಶ್ವರಸಿಂಗ್, ಡಿಎಚ್‌ಓ ಡಾ.ಎಲ್.ಶಂಕರನಾಯ್ಕ, ತಾಲೂಕು ಅರೋಗ್ಯಾಧಿಕಾರಿ ಡಾ.ಡಿ.ಭಾಸ್ಕರ ಉಪಸ್ಥಿತರಿರಲಿದ್ದಾರೆ. ವೈದ್ಯರಾದ ಡಾ.ಎಸ್. ಗಂಗೋತ್ರಿ, ಡಾ. ಪ್ರವೀಣ್ ಆರ್ ಅರಕೇರಿ ಮತ್ತು ಡಾ.ನವೀನ್ ಕುಮಾರ್.ಎ ತಪಾಸಣೆ ನಡೆಸಿ ಚಿಕಿತ್ಸೆ ನೀಡಲಿದ್ದಾರೆ.

**ತಪಾಸಣೆ:** ಗರ್ಭಿಣಿಯರಿಗೆ ಉಚಿತ ತಪಾಸಣೆ ಬಂಜೆತನ ಚಿಕಿತ್ಸೆ, ಪ್ಯಾಪ್ ಸ್ಮೀಯರ್, ಮಮೊಗ್ರಫಿ, ಮೂಳೆ ಖನಿಜ ಸಾಂದ್ರತೆ, ಕಣ್ಣುಗಳನ್ನು ತಪಾಸಣೆ, ಹೃದಯ ತಪಾಸಣೆ ECG ಮತ್ತು 2D echoತಪಾಸಣೆ ನಡೆಯಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ.ವಿ.ಜಿ.

# ಬಿಸಿಲಿನ ತಾಪಮಾನದಿಂದ ರಕ್ಷಿಸಿಕೊಳ್ಳಿ

### ಡಿಎಚ್‌ಓ ಡಾ.ವೈ.ರಮೇಶ್ ಬಾಬು ಸಲಹೆ। ತೀವ್ರ ಉಸಿರಾಟವಿದ್ದಲ್ಲಿ 104ಕ್ಕೆ ಕರೆ ಮಾಡಿ
### ತೆಳು ಬಣ್ಣದ ಹತ್ತಿಯ ಬಟ್ಟೆ ಧರಿಸಬೇಕು। ಕೈಗೆಟುಕುವಂತೆ ಕುಡಿಯುವ ನೀರನ್ನು ಇಟ್ಟುಕೊಳ್ಳಿ

**ಹಂಪಿ ಟೈಮ್ಸ್ ಬಳ್ಳಾರಿ**

ಬೇಸಿಗೆಯಲ್ಲಿ ಬಿಸಲಿನ ತಾಪವು ಹೆಚ್ಚಾಗಿರುವುದರಿಂದ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮ ಹಾಗೂ ಅವುಗಳ ಮುಂಜಾಗ್ರತಾ ಕ್ರಮಗಳ ಬಗ್ಗೆ ಸಾರ್ವಜನಿಕಕು ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಕೋರಿದ್ದಾರೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ಸಾರ್ವಜನಿಕರು ಬಿಸಿಲಿನ ತಾಪಮಾನದಿಂದ ಹೇಗೆ ರಕ್ಷಿಸಿಕೊಳ್ಳಬೇಕು ಮತ್ತು ಬಿಸಿಲಿನ ಬೇಗೆಯಿಂದ ಮನುಷ್ಯ ಶಾಖಾಘಾತಕ್ಕೊಳಗಾದಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಈ ಕೆಳಕಂಡಂತೆ ತಿಳಿಸಿದ್ದಾರೆ.

**ಶಾಖಾಘಾತದ ಲಕ್ಷಣಗಳು**

ಅತಿಹೆಚ್ಚು ಬಿಸಿಲಿನ ತಾಪಮಾನದಿಂದ ಮನುಷ್ಯನು ಶಾಖಾಘಾತಕ್ಕೆ ಒಳಗಾಗುವ ಸಂಭವವಿರುತ್ತದೆ. ಅದರಲ್ಲಿ ಮುಖ್ಯವಾಗಿ ಸಂಭ್ರಾಂತಿ, ಅಸಂಗತ ಮಾತು, ವ್ಯತ್ಯಸ್ಥ ಪ್ರಜ್ಞೆ ಶಾಖಾಘಾತದ ಲಕ್ಷಣಗಳಾಗಿವೆ.

**ಶಾಖಾಘಾತಕ್ಕೆ ಚಿಕಿತ್ಸೆ**

ಮನುಷ್ಯನು ಬಿಸಿಲಿನ ಬೇಗೆಯಿಂದ ಶಾಖಾಘಾತಕ್ಕೊಳಗದಾಗ ನೆರಳಿರುವೆಡೆಗೆ ಸ್ಥಳಾಂತರಿಸಬೇಕು. ವ್ಯಕ್ತಿಯ ವಸ್ತ್ರಗಳನ್ನು ಸಡಿಲಗೊಳಿಸಿ, ಅಂಗಾತ ಮಲಗಿಸಿ, ಕಾಲುಗಳನ್ನು ಎತ್ತರಿಸಿ, ಸಾಮಾನ್ಯ ನೀರಿನಿಂದ ದೇಹವನ್ನು ಒರೆಸಬೇಕು. ಇಲ್ಲವೇ ಹತ್ತಿರದ ವೈದ್ಯರನ್ನು ಕರೆಸಬೇಕು.

ಎಲ್ಲಾ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೇಸಿಗೆಯಲ್ಲಿ ಬರಬಹುದಾದ ರೋಗಗಳ ಆರೈಕೆಗಾಗಿ ಓಆರ್‌ಎಸ್, ಐವಿ ಪ್ಲೂಯಿಡ್ಸ್ ಮತ್ತು ಜೀವರಕ್ಷಕ ಔಷಧಗಳ ದಾಸ್ತಾನು ಇಟ್ಟುಕೊಳ್ಳುವಂತೆ ಹಾಗೂ ಆರೋಗ್ಯಾಧಿಕಾರಿಗಳು ನೀರಿನ ಗುಣಮಟ್ಟದ ಪರೀಕ್ಷೆಯನ್ನು ನಿಯಮಿತವಾಗಿ ಮಾಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ. ರಮೇಶ್ ಬಾಬು ಅವರು ಸೂಚಿಸಿದ್ದಾರೆ.

## ಮನೆಯಲ್ಲಿ ತಯಾರಿಸಿದ ಆಹಾರಕ್ಕೆ ಆದ್ಯತೆ ನೀಡಿರಿ

### ಏನು ಮಾಡಬಾರದು

ಬಿಗಿಯಾದ, ಗಾಢ ಬಣ್ಣದ, ಸಿಂಥೆಟಿಕ್ ಬಟ್ಟೆ ಧರಿಸಬಾರದು. ಕುಷನ್‌ಯುಕ್ತ ಕುರ್ಚಿಯಲ್ಲಿ ಕೂಡಬಾರದು. ಸೋಡಾ ಇತ್ಯಾದಿ ಕಾರ್ಬೋನೇಟೆಡ್ ತಂಪು ಪಾನಿಯಗಳನ್ನು ಕುಡಿಯಬೇಡಿ (ಬಾಯಾರಿಕೆಯಾದಾಗ ಕಡ್ಡಾಯವಾಗಿ ನೀರು ಕುಡಿಯಬೇಕು). ಬೆವರನ್ನು ಒರೆಸಲು ಒರಟಾದ ಬಟ್ಟೆಯನ್ನು ಉಪಯೋಗಿಸಬೇಡಿ. ಕಾಫಿ, ಟೀ, ಅತಿ ಸಕ್ಕರೆ ಅಂಶವುಳ್ಳ ಪಾನೀಯ ಅತಿಯಾಗಿ ಸೇವಿಸಬಾರದು. ಬಿಸಿಯಾದ ಮಸಾಲೆಯುಕ್ತ ಆಹಾರ ತಿನ್ನಬಾರದು. ಮಾಂಸಹಾರ ಸೇವನೆ ಮತ್ತು ಮಧ್ಯಪಾನ ವರ್ಜಿಸಿಬೇಕು. ಬಿಗಿಯಾದ ಗಾಳಿಯಾಡದ ಪಾದರಕ್ಷೆ ಅಥವಾ ಶೂ ಧರಿಸಬೇಡಿ. ಉಷ್ಣತೆಯಿಂದ ಸುಸ್ತಾದಾಗ ತುಂಬಾ ತಣ್ಣಗಿನ ಅಥವಾ ಶೀತಲೀಕರಿಸಿದ ನೀರಿನಿಂದ ಒರೆಸಿಕೊಳ್ಳಬೇಡಿ (ಇದರಿಂದ ದೇಹದ ಹೊರಪದರದಲ್ಲಿನ ರಕ್ತನಾಳಗಳು ಸಂಕುಚಿತಗೊಂಡು ದೇಹದ ಒಳಗಿನ ಉಷ್ಣತೆ ದೇಹದೊಳಗೆ ಬಂಧಿತವಾಗಿ ಅಂಗಾಂಗಗಳು ನಿಷ್ಕ್ರಿಯಗೊಂಡು ಹೆಚ್ಚಿನ ಹಾನಿಯಾಗುವ ಸಂಭವವಿರುತ್ತದೆ). ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ–ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ಧೀಕರಿಸದೇ ಇರುವ ನೀರನ್ನು ಮತ್ತು ಕೆರೆ, ಕುಂಟೆಗಳ ನೀರನ್ನು ನೇರವಾಗಿ ಕುಡಿಯಬಾರದು. ಕೈಗಳನ್ನು ತೊಳೆದುಕೊಳ್ಳದೇ ಆಹಾರವನ್ನು ಸೇವಿಸಬೇಡಿ, ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಬಯಲು ಪ್ರದೇಶಗಳಲ್ಲಿ ಮಲ, ಮೂತ್ರ ವಿಸರ್ಜನೆ ಮಾಡಬಾರದು. ರಸ್ತೆ ಬದಿ ತೆರೆದಿಟ್ಟ ಆಹಾರ ಪದಾರ್ಥ ಮತ್ತು ಕತ್ತಿರಿಸಿಟ್ಟ ಹಣ್ಣುಗಳನ್ನು ತಿನ್ನಬಾರದು. ತಯಾರಿಸಿದ ಆಹಾರವನ್ನು ಮುಚ್ಚಳದಿಂದ ಮುಚ್ಚಬೇಕು ಎಂದು ಹೇಳಿದ್ದಾರೆ.



ಡಾ॥ ವೈ.ರಮೇಶ್ ಬಾಬು

### ಏನು ಮಾಡಬೇಕು

ಸಡಿಲವಾದ, ತೆಳು ಬಣ್ಣದ ಹತ್ತಿಯ ಬಟ್ಟೆ ಧರಿಸಬೇಕು. ಕೈಗೆಟುಕುವಂತೆ ಕುಡಿಯುವ ನೀರನ್ನು ಇಟ್ಟುಕೊಳ್ಳಿ. ಆಗಾಗ್ಗೆ ನಿಧಾನವಾಗಿ ಧಾರಳವಾಗಿ ಉಪ್ಪು, ಸಕ್ಕರೆ ಮಿಶ್ರಿತ ನೀರನ್ನು ಕುಡಿಯಿರಿ. ಹಣ್ಣಿನ ರಸ, ಪಾನಕಗಳನ್ನು ಕುಡಿಯಿರಿ. ಹತ್ತಿಯ ನುಣುಪಾದ ಬಟ್ಟೆ, ಟಿಶ್ಯೂ ಕರವಸ್ತ್ರದಿಂದ ಬೆವರನ್ನು ಒರೆಸಿರಿ. ನೀರು, ಮಜ್ಜಿಗೆ, ಎಳೆನೀರು ಕುಡಿಯಬಹುದು. ಬೆಚ್ಚಗಿನ, ಮಸಾಲೆ ರಹಿತ, ಶುದ್ಧ ಸಾತ್ವಿಕ ಆಹಾರ ಸೇವಿಸಬೇಕು. ಗಾಳಿಯಾಡುವಂತಹ ಪಾದರಕ್ಷೆ ಧರಿಸಿರಿ. ಮನೆಯಿಂದ ಹೊರಗಡೆ ಹೋಗುವಾಗ ಜೊತೆಯಲ್ಲಿ ತಪ್ಪದೇ ಶುದ್ಧ ಕುಡಿಯುವ ನೀರನ್ನು ತೆಗೆದುಕೊಂಡು ಹೋಗಬೇಕು ಎಂದು ಹೇಳಿದ್ದಾರೆ.

ಚರ್ಮ ಕೆಂಪಾದರೆ, ಬೆವರು ಕಡಿಮೆಯಾದರೆ, ದೇಹದ ಉಷ್ಣತೆ ಜಾಸ್ತಿಯಾದರೆ, ದೀರ್ಘವಾದ ತೀರ್ವ ಉಸಿರಾಟವಿದ್ದಲ್ಲಿ ತುರ್ತಾಗಿ ವೈದ್ಯರನ್ನು ಸಂಪರ್ಕಿಸಬೇಕು. ಇಲ್ಲವೇ 104ಕ್ಕೆ ಕರೆ ಮಾಡಬೇಕು. ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ–ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ಧೀಕರಿಸಿದ ನೀರು ಅಥವಾ ನೀರು ಶುದ್ದೀಕರಣ ಘಟಕದ ನೀರನ್ನು ಕುಡಿಯಲು ಬಳಸಿ ಎಂದು ಅವರು ತಿಳಿಸಿದ್ದಾರೆ. ಕೈಗಳನ್ನು ಸಾಬೂನು ಮತ್ತು ನೀರಿನಿಂದ 45 ಸೆಕೆಂಡ್‌ಗಳ ಕಾಲ ತೊಳೆದ ನಂತರ ಆಹಾರ ಸೇವಿಸಬೇಕು. ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಮಲ, ಮೂತ್ರ ವಿಸರ್ಜನೆಗಾಗಿ ಶೌಚಾಲಯ ಬಳಸಬೇಕು. ಸುರಕ್ಷಿತ ಆಹಾರ ಮಾತ್ರ ಸೇವಿಸಿ, ಆದಷ್ಟು ಮನೆಯಲ್ಲಿ ತಯಾರಿಸಿದ ಆಹಾರಕ್ಕೆ ಆದ್ಯತೆ ನೀಡಿರಿ ಎಂದು ತಿಳಿಸಿದ್ದಾರೆ.




## ವಚನ ಅರಿವು

### ಶರಣರಾಗಲು ದಾರಿ

**ಆಸೆಯನಳಿದು, ರೋಷವ ನಿಲಿಸಿ,**
**ಜಗದ ಪಾಶವ ಹರಿದು,**
**ಈಶ್ವರನೆನಿಸಿಕೊಂಬ ಶರಣರ**
**ಜಗದ ಹೇಸಿಗಳೆತ್ತಬಲ್ಲರು ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.**
**– ಹಡಪದ ಲಿಂಗಮ್ಮ**

ಶರಣರಾಗಬೇಕೆಂದರೆ ಮೊದಲು ಭಕ್ತರಾಗಬೇಕು. ಭಕ್ತಿಯ ಪಥವಿಡಿಯುವುದೆಂದರೆ ಮನವನ್ನು ಸ್ವಚ್ಛ ಮಾಡಿಕೊಳ್ಳಬೇಕು. ಮನಸ್ಸಿನಲ್ಲಿರುವ ದುರಾಸೆಯನ್ನು, ಅಸಹಜ ಮೋಹವನ್ನು ಅಳಿಸಿ ಹಾಕಬೇಕು. ಸಿಟ್ಟು ಬಿಟ್ಟು ಸಮಾಧಾನವಾಗಿ ಮನಸ್ಸಿನಲ್ಲಿ ಒಳ್ಳೆಯ ಆಲೋಚನೆಗಳನ್ನು ತುಂಬಿಕೊಳ್ಳಬೇಕು. ಈ ಜಗತ್ತಿನಲ್ಲಿ ಹಲವು ಜಂಜಾಟಗಳಿಗೆ ಸಿಕ್ಕು ಕಾಮ, ಕ್ರೋಧ ಮುಂತಾದ ಆಸೆ, ಆಮಿಷಗಳಿಗೆ ಒಳಗಾಗಿ ಆತ್ಮಜ್ಞಾನವನ್ನು ಕಾಣದೆ ಮೋಹದೊಳಗೆ ಬಂದಿಯಾಗಿರುತ್ತೇವೆ. ಇಂತಹ ಮೋಹ ಪಾಶವನ್ನು ಹರಿಯಬೇಕು. ಹೀಗೆ ಜೀವನದಲ್ಲಿ ತನು, ಮನ, ಭಾವ ಶುದ್ಧವಾಗಿಟ್ಟುಕೊಂಡು ಅರಿವಿನ ದಾರಿಯಲ್ಲಿ ಸಾಗುವ ಶರಣರು ಸಾಕ್ಷಾತ್ ಈಶ್ವರರೇ ಆಗಿರುತ್ತಾರೆ. ಶರಣರ ವಿಚಾರಗಳನ್ನು ತಿಳಿಯಬೇಕು. ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅರಿವಿನ ದಾರಿ ಹಿಡಿಯಬೇಕು ಇಲ್ಲದಿದ್ದರೆ ಜಗದಲ್ಲಿ ಹೇಸಿಗಳೆನಿಸಿಕೊಳ್ಳುತ್ತಾರೆ ಎನ್ನುತ್ತಾಳೆ ಶರಣೆ ಲಿಂಗಮ್ಮ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ಪ್ರತಿ ವಸ್ತುವಿನಲ್ಲೂ ಇದೆ ಭಾವನೆ



ದೀಪಶ್ರೀ ಎಸ್ ಕೂಡ್ಲಿಗಿ
ಶಿಕ್ಷಕಿ, ಹವ್ಯಾಸಿ ಬರಹಗಾರ್ತಿ

ಅವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದರು. ಜೊತೆಗೆ ಆದರ್ಶ ಬದುಕು, ಬಾಳಿ ಸೇವೆಯಿಂದ ನಿವೃತ್ತಿ ಹೊಂದಿದ್ದರು. ನಿರಂತರ ಚಟುವಟಿಕೆಗಳಿಂದ ಇದ್ದರು. ನಿವೃತ್ತಿಯ ಬಳಿಕ ಸಮಯ ದೂಡಲು ಮನೆಯ ಸಣ್ಣಪುಟ್ಟ ಕೆಲಸಗಳನ್ನು ಮಾಡುವುದು, ಮಗ, ಸೊಸೆ, ಮೊಮ್ಮಗಳೊಡನೆ ಕಾಲ ಕಳೆಯುವುದು ಅವರ ದಿನಚರಿಯಾಗಿತ್ತು. ಕೆಟ್ಟು ಹೋಗಿದ್ದ ತಮ್ಮ ಪ್ರೀತಿಯ ಗಡಿಯಾರವನ್ನು ನಿತ್ಯ ಒರೆಸಿ ಇಡುವುದು ಅವರ ದಿನಚರಿಗಳಲ್ಲಿ ಒಂದಾಗಿತ್ತು. ಅಜ್ಜನ ಈ ಕೆಲಸವನ್ನು ನಿತ್ಯ ಮೊಮ್ಮಗಳು ಗಮನಿಸುತ್ತಿದ್ದಳು.

ಇದೇ ಕೆಲಸ ಪುನರಾವರ್ತನೆಯಾದಾಗ ಕುತೂಹಲ ತಾಳದೆ ಆಟವಾಡುತ್ತಿದ್ದ ಮೊಮ್ಮಗಳು ಒಳ ಓಡಿಬಂದು ಕೇಳಿದಳು ಅಜ್ಜ, ನೀವು ದಿನಾಲೂ ಕೆಟ್ಟು ಹೋದ ಆ ಗಡಿಯಾರವನ್ನು ಏಕೆ ಶುಚಿಗೊಳಿಸುತ್ತೀರಿ? ಇದರ ಬದಲು ಬೇರೆ ಗಡಿಯಾರ ಖರೀದಿ ಮಾಡಬಹುದಲ್ಲವೇ? ಎಂದಳು.

ನೋಡು ಮಗು, ಈಗ ನಾನು ನಿವೃತ್ತಿ ಹೊಂದಿರುವೆ ಹಾಗಾದರೆ ನೀನು ನನ್ನನ್ನು ಮನೆಯಿಂದ ಆಚೆ ಅಟ್ಟುತ್ತೀಯಾ? ಎಂದು ಪ್ರಶ್ನಿಸಿದರು.

ಮುಗ್ಧತೆಯಿಂದ ಇಲ್ಲ ಎಸೆಯಲ್ಲ ಎಂದ ಮಗು ನೀವೇ ನನ್ನ ಅಜ್ಜ ಎಂದು ತಬ್ಬಿಕೊಂಡಿತು. ಮಗು ಇದು ಸಾಮಾನ್ಯ ಗಡಿಯಾರ ಅಲ್ಲ. ಇದರ ಹಿಂದೆ ಹಲವಾರು ಭಾವನೆಗಳಿವೆ. ಈ ಗಡಿಯಾರವನ್ನು ನಾನು ನನ್ನ ಮೊದಲ ಮದುವೆ ವಾರ್ಷಿಕೋತ್ಸವಕ್ಕೆ ನನ್ನಾಕೆಗೆ ಕೊಟ್ಟ ಗಡಿಯಾರ. ಆಕೆ ನಿತ್ಯ ಇದೇ ಗಡಿಯಾರವನ್ನು ನೋಡಿ ತನ್ನ ನಿತ್ಯದ ದಿನಚರಿ ನಿಭಾಯಿಸುತ್ತಿದ್ದಳು. ಸಂಜೆ ಸಮಯ ನೋಡುತ್ತಾ ನನ್ನ ಬರುವಿಕೆಗಾಗಿ ಬಾಗಿಲಿನಲ್ಲಿ ಕಾಯುತ್ತಿದ್ದಳು. ಆಕೆ ಸತ್ತ ಮರುಕ್ಷಣವೇ ಈ ಗಡಿಯಾರ ಕೆಟ್ಟು ಹೋಯಿತು. ಅಂತಹ ಪ್ರಾಮಾಣಿಕತೆ ನನಗೆಲ್ಲಿದೆ....

ಅಜ್ಜನ ಮಾತು ಕೇಳಿ ಮೊಮ್ಮಗಳ ಕಣ್ಣಲ್ಲೂ ನೀರು... ಅದಕ್ಕೆ ಕಂದ ಈ ಗಡಿಯಾರದ ಮೇಲೆ ನನಗೆ ಪ್ರೀತಿ ಜಾಸ್ತಿ ಎಂದರು ಅಜ್ಜ. ನಮ್ಮ ಜೀವನದ ಮೇಲೆ ಸಹ ಕೇವಲ ವ್ಯಕ್ತಿಗಳು ಮಾತ್ರವಲ್ಲ ವಸ್ತುಗಳು ಪ್ರಭಾವ ಬೀರುತ್ತವೆ ಎಂಬುದಕ್ಕೆ ಈ ಕಥೆ ಸಾಕ್ಷಿ. ಗಾಂಧೀಜಿಯವರು ಯಾವಾಗಲೂ ತಮ್ಮ ಸೊಂಟಕ್ಕೆ ಗಡಿಯಾರ ಸಿಕ್ಕಿಸಿಕೊಳ್ಳುತ್ತಿದ್ದರು. ಇದು ಅವರಿಗೆ ಸಮಯದ ಮಹತ್ವವನ್ನು ತಿಳಿಸುತ್ತಿತ್ತು. ಗಡಿಯಾರ ಕೇವಲ ಒಂದು ಉದಾಹರಣೆ ಅಷ್ಟೇ. ಈ ದಿಸೆಯಲ್ಲಿ ನಮ್ಮಲ್ಲಿರುವ ಹಲವಾರು ವಸ್ತುಗಳು ನಮ್ಮ ಮೇಲೆ ಧನಾತ್ಮಕ ಪ್ರಭಾವ ಬೀರಬಹುದು, ಬೀರಿರಬಹುದು ನೀವು ಸಹ ಒಮ್ಮೆ ಯೋಚಿಸಿ ನೋಡಿ.

**ಬರಹಗಾರರ ಒತ್ತಾಸೆಯ ಮೇರೆಗೆ ಬೆಳಕಿನ ಹಾದಿ ಕಾಲಂ ಆರಂಭಿಸಲಾಗಿದೆ. 250 ಪದಗಳು ಮೀರದಂತೆ ನೀವು ಬರೆದು ಕಳುಹಿಸಬಹುದು. ಯುವ ಬರಹಗಾರರಿಗೆ ವೇದಿಕೆ ಸಿದ್ಧವಿದೆ, ಬರವಣಿಗೆ ನಿಮ್ಮದಾಗಲಿ...**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಜೈಲ್ ಡೈರಿ

ರಶ್ಯನ್ ಲೇಖಕ ಚೆಕಾವ್ ಬರೆದ ಒಂದು ಕತೆಯಿದೆ–'ದಿ ಬೆಟ್'. ಕತೆ ಮರಣದಂಡನೆ ಮತ್ತು ಜೀವಾವಧಿ ಶಿಕ್ಷೆಗಳಲ್ಲಿ ಯಾವುದು ಉಚಿತ ಎಂಬ ಬಗ್ಗೆ ಇಬ್ಬರು ಗೆಳೆಯರ ನಡುವಿನ ವಾಗ್ವಾದದಿಂದ ಆರಂಭವಾಗುತ್ತದೆ. ವಕೀಲ ವೃತ್ತಿಯ ಗೆಳೆಯನು ಮರಣದಂಡನೆ ಅಮಾನುಷವೆಂದು ವಿರೋಧಿಸಿ ಜೀವಾವಧಿ ಶಿಕ್ಷೆಯ ಪರವಾಗಿ ವಾದಿಸುತ್ತಾನೆ. ಮನಃಪರಿವರ್ತನೆಗೆ ಅವಕಾಶ ಒದಗಿಸುವ ಅದುವೇ ಸರಿಯೆನ್ನುತ್ತಾನೆ. ಇದನ್ನು ಸಾಧಿಸಿ ತೋರಿಸಲು ತಾನು ಒಂಟಿಯಾಗಿ ಸೆರೆಮನೆಯಲ್ಲಿ ಇರಬಲ್ಲೆ ಎನ್ನುತ್ತಾನೆ. ಹಾಗೆ ಹದಿನೈದು ವರ್ಷ ಇರುವುದಾದರೆ ಎರಡು ಲಕ್ಷ ರೂಬಲ್ ಕೊಡುತ್ತೇನೆ ಎಂದು ಬ್ಯಾಂಕರ್ ಗೆಳೆಯ ಘೋಷಿಸುತ್ತಾನೆ.

ಅದೊಂದು ಜೂಜು. ವಕೀಲನು ಯಶಸ್ವಿಯಾಗಿ ಸೆರೆವಾಸ ಮುಗಿಸುತ್ತಾನೆ. ಆದರೆ ಗೆಳೆಯ ಬಿಡುಗಡೆಯಾದಲ್ಲಿ ತಾನು ಕೊಡಬೇಕಾದ ಜೂಜಿನ ಹಣದ ಬ್ಯಾಂಕರ್ ಚಿಂತಿತನಾಗುತ್ತಾನೆ. ಗೆಳೆಯನನ್ನು ಕೊಲ್ಲಲು ಆಲೋಚಿಸುತ್ತಾನೆ. ಆದರೆ ಸೆರೆಯಿಂದ ಬಿಡುಗಡೆಗೊಂಡವನು ಜೂಜಿನ ಮೊತ್ತ ಪಡೆಯಲು ಬರುವುದೇ ಇಲ್ಲ. ಕಣ್ಮರೆಯಾಗುತ್ತಾನೆ. ಸೆರೆಮನೆಯ ಏಕಾಂತದಲ್ಲಿ ಮಾಡಿದ ಅಧ್ಯಯನ ಮತ್ತು ಧ್ಯಾನದಿಂದ ಅವನ ಆಲೋಚನ ಕ್ರಮವೇ ಬದಲಾಗಿರುತ್ತದೆ. ಜೀವನಕ್ಕೆ ಹೊಸ ಅರ್ಥ ಕಂಡುಕೊಂಡಿರುತ್ತಾನೆ. ಬಾಳಿನ ಅಮೂಲ್ಯವಾದ ಯೌವನವನ್ನು ಒಂಟಿಯಾಗಿ ಕಳೆದು ಹಣದಿಂದ ಮತ್ತೆ ಬದುಕುವುದರಲ್ಲಿ ಅರ್ಥವೇನಿದೆ ಎಂಬ ಪ್ರಶ್ನೆಯೂ ಅವನಲ್ಲಿ ಹುಟ್ಟಿರಬಹುದು.

ಜೈಲು ಅಧೀಕ್ಷಕರಾಗಿರುವ ಮಿತ್ರ ಡಾ. ಮ್ಯಾಗೇರಿಯವರ ಜೈಲುಡೈರಿಯ ಕತೆಗಳನ್ನು ಓದುವಾಗ ನನಗೆ ಚೆಕಾವನ ಈ ಕಥೆ ನೆನಪಿಗೆ ಬಂದಿತು. ಇಲ್ಲಿರುವ ಹಣಕ್ಕಾಗಿ ಅಣ್ಣನನ್ನೇ ಕೊಂದ ತಮ್ಮನ ಪ್ರಕರಣ ಓದುವಾಗಲಂತೂ ಚೆಕಾವನ ಕತೆ, ಬೇರೊಂದು ತಿರುವು ಪಡೆದಿದೆ ಎಂದು ಅನಿಸಿತು. ನಮ್ಮ ಸಮಾಜದ ಸಂಕಟಗಳಿಗೆ ಅತಿ ಸಮೀಪದರ್ಶನ ಸಿಗುವುದು ವೈದ್ಯರಿಗೆ, ಪೋಲಿಸರಿಗೆ, ವಕೀಲರಿಗೆ ಮತ್ತು ಜೈಲು ಅಧಿಕಾರಿಗಳಿಗೆ ಎಂದು ಕಾಣುತ್ತದೆ. ತಮ್ಮ ಸೇವಾವಧಿಯಲ್ಲಿ ಭೇಟಿಯಾದ 'ಅಪರಾಧಿ'ಗಳಿಂದ ಪಡೆದ ಮಾಹಿತಿ ಮತ್ತು ಅನುಭವವನ್ನು ಮಾಗೇರಿಯವರು ಇಲ್ಲಿ ನಿರೂಪಿಸಿದ್ದಾರೆ. ಇದೊಂದು ಕನ್ನಡದಲ್ಲಿ ವಿಶಿಷ್ಟ ಪುಸ್ತಕ. ಇದು ಕೈದಿಗಳ ಹಿನ್ನೆಲೆಯಲ್ಲಿ ಅಡಗಿರುವ ಅಸಹಾಯಕತೆ, ದಾರುಣ ಬದುಕು ಮತ್ತು ಕ್ರೌರ್ಯಗಳನ್ನು ಶೋಧಿಸುತ್ತದೆ. ಇದನ್ನು ಓದುವಾಗ ಬದುಕು ಇಷ್ಟೊಂದು ಕ್ರೂರವಾಗಿರಲು ಸಾಧ್ಯವೇ ಎಂದು ಸೋಜಿಗವೂ ಗಾಬರಿಯೂ ಆಗುತ್ತದೆ. ಹಸಿ ಬಾಣಂತಿಯನ್ನು ಕಾಮುಕತೆಗಾಗಿ ಕೊಂದ ಕುಡುಕಗಂಡನ ಪ್ರಸಂಗ ಓದುತ್ತಿದ್ದ ಹಾಗೆ ನಡುಕ ಹುಟ್ಟುತ್ತದೆ. ತಾಯಿಯೇ ಮಗನಿಗೆ ಸುಪಾರಿ ಕೊಟ್ಟು ಕೊಲ್ಲಿಸುವ ಕಥೆಯೂ ಹೀಗೇ ಇದೆ. ಇಲ್ಲಿನ ಕ್ರೌರ್ಯಕ್ಕೆ ಹೆಚ್ಚು ಬಲಿಪಶುಗಳು ಮಹಿಳೆಯರೇ. ಈ ಕೊಲೆಗಾರ ಕಳ್ಳರ ಜಗತ್ತಿನಲ್ಲಿ ಕೇವಲ ಅಪರಾಧವಿಲ್ಲ. ಮಾನವೀಯ ಸಂಬಂಧಗಳ ಎಳೆಗಳೂ ಇವೆ. ಪೆರೋಲಿನ ಮೇಲೆ ಬಿಡುಗಡೆಯಾಗಿದ್ದ ಒಬ್ಬ ಕೈದಿ, ಸಂಸಾರವನ್ನು ಬಿಟ್ಟು ಮರಳಿ ಜೈಲಿಗೆ ಹೋಗಲು ಆಗದೆ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗವನ್ನು ಗಮನಿಸಬಹುದು.

ಇಲ್ಲಿ ಲೇಖಕರು ತಮ್ಮ ಅನುಭವವನ್ನು ನಿರೂಪಿಸುತ್ತ ಕಟ್ಟಿರುವ ಈ ಕಥನವು ಚಿಂತನೆಯಾಗಿ ರೂಪಾಂತರಗೊಂಡಿದೆ. ಈ ಚಿಂತನೆಯಲ್ಲಿ ಬದುಕಿನ ಪ್ರೀತಿಯೂ, ಚಂದವಾಗಿದ್ದ ಬದುಕು ಹೀಗೆ ತಿರುವು ಪಡೆಯಿತಲ್ಲ ಎಂಬ ವೇದನೆಯೂ, ವ್ಯಕ್ತಿಗಳ ಭಾವನೆಗಳ ಬಗ್ಗೆ ಮಾನವೀಯ ಕಾಳಜಿಯೂ ಇದೆ. ಇಲ್ಲಿ ಅಪರಾಧ ಸುದ್ದಿಯನ್ನು ಓದುಗರಿಗೆ ಪ್ರೇಕ್ಷಕರಿಗೆ ಉಣಬಡಿಸುವ ಪೀತಪತ್ರಿಕೆ ಹಾಗೂ ಕ್ರೈಮ್ ಧಾರವಾಹಿಗಳ ರೋಚಕತೆಯ ಬದಲಿಗೆ, ವಿದ್ಯಮಾನಗಳ ಹಿಂದಿನ ದುರಂತ ಪ್ರಜ್ಞೆಯ ಹುಡುಕಾಟವಿದೆ. ಹೀಗಾಗಿ ಇದು ಘಾತಕ ಅನುಭವಗಳ ಸರಮಾಲೆಯಾಗದೆ, ಅವುಗಳ ಮೂಲಕ ಜೀವನತತ್ವ ಶೋಧಿಸುವ ದಾರ್ಶನಿಕ ಕೃತಿಯಾಗಲು ಹವಣಿಸಿದೆ.

ಇಲ್ಲಿನ ನಿರೂಪಣೆಯಲ್ಲಿ ಮನಃಪರಿವರ್ತನೆ ಆತ್ಮಾವಲೋಕನದ ಮಾಗುವಿಕೆ ಪರಿತಾಪಗಳ ಮಾತು ಮತ್ತೆ ಮತ್ತೆ ಬರುತ್ತದೆ. ಇದಕ್ಕೆ ಪೂರಕವಾಗಿ ಜಗತ್ತಿನ ವಿವಿಧ ದಾರ್ಶನಿಕರ ಉಲ್ಲೇಖವೂ ಬರುತ್ತದೆ. ಈ ಮಹನೀಯರ ದಾರ್ಶನಿಕ ಚಿಂತನೆಗಳು ಕೈದಿಗಳ ಮನಸ್ಸನ್ನು ಅರಿಯಲು ಮತ್ತು ಅವರನ್ನು ಬದಲಿಸಲು ಲೇಖಕರಿಗೆ ನೆರವಾಗಿರಬಹುದು. ಆದರೆ ದುಃಖಿತ ಜನರ ಬದುಕೇ ಹೊಮ್ಮಿಸುವ ದರ್ಶನವು ಇದಕ್ಕಿಂತ ಘನವಾಗಿದೆ. ಸಮಾಜದ ಕಣ್ಣಲ್ಲಿ ನಿಕೃಷ್ಟರಾದ 'ಅಪರಾಧಿ'ಗಳ ಬದುಕಿನ ಬಗ್ಗೆ ಟೀಕೆಟಿಪ್ಪಣಿ ಮಾಡುವ ಅವಕಾಶವು ಅಧಿಕಾರಿಯಾದ ಲೇಖಕರಿಗೆ ಸಿಕ್ಕಿದೆ. ಅದುವೇ ಮತ್ತೊಬ್ಬರ ಬದುಕಿನ ಬಗ್ಗೆ ಅಖೈರಾದ ನೈತಿಕ ತೀರ್ಮಾನ ಕೊಡುವುದಕ್ಕೆ ಕೂಡ ಪ್ರೇರೇಪಿಸಿದೆ. ಇದು ಕಷ್ಟ. ಯಾಕೆಂದರೆ ಬಾಳಿನ ಅನೇಕ ಸಂಗತಿಗಳು ತರ್ಕಕ್ಕೆ ನಿಲುಕದವು. ಹೀಗಾಗಿ ಲೇಖಕರ ನಿರೂಪಣೆಯಾಚೆ ಓದುಗರಿಗೆ 'ಅಪರಾಧಿ'ಗಳ ಬಾಳಿನ ವಿವರಗಳೇ ಚಿಂತನೆಗೆ ಹಚ್ಚುವಷ್ಟು ಗಹನವೂ ಗೂಢವೂ ಆಗಿದೆ.




ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಲೇಖಕರು 'ಅಪರಾಧಿ'ಗಳ ವರ್ತನೆಯನ್ನು ವಿಶ್ಲೇಷಿಸಲು ದರ್ಶನಶಾಸ್ತ್ರ ಮತ್ತು ಮನೋವಿಜ್ಞಾನಗಳ ನೆರವನ್ನು ಪಡೆದಿದ್ದಾರೆ. ಅವರು ಕ್ರೌರ್ಯ ಹಿಂಸೆ ಕುರಿತ ಚರ್ಚೆಯು ಯಾವತ್ತೂ ಮನುಷ್ಯರೊಳಗಿರುವ ಆದಿಮವೂ ಪ್ರವೃತ್ತಿಪರವೂ ಆದ ಮೂಲಭೂತ ವರ್ತನೆಗಳ ನೆಲೆಯಲ್ಲಿ ಮಾಡುತ್ತಾರೆ. ಕೈದಿಗಳ ಅತಿರೇಕದ ವರ್ತನೆಗಳನ್ನು ಕಾನೂನಿನ ಚೌಕಟ್ಟುಗಳಲ್ಲಿ ನಿಭಾಯಿಸಿದ್ದಾರೆ. ಆದರೆ ಈ ಮನಃಶಾಸ್ತ್ರೀಯ ನೆಲೆಯು ಅಪರಾಧದ ಸಾಮಾಜಿಕ ಚಾರಿತ್ರಿಕ ಹಿನ್ನೆಲೆಯನ್ನು ಮರೆಯುತ್ತದೆ. ಶಾಸ್ತ್ರಗಳ ಮತ್ತು ಕಾನೂನುಗಳ ಚೌಕಟ್ಟುಗಳಾಚೆ 'ಅಪರಾಧ'ವನ್ನು ಬಾಳಿನ ವಿಚಿತ್ರ ಹರಿವಿನ ನೆಲೆಯಲ್ಲಿ ನೋಡುವುದು ಹೇಗೆ ಎಂಬ ಪ್ರಶ್ನೆಯನ್ನು ಉಳಿಸುತ್ತದೆ.

ಸಾಹಿತ್ಯದ ಮಹತ್ವ ಇರುವುದೇ ಈ ಪ್ರಶ್ನೆಯನ್ನು ಎತ್ತಿಕೊಳ್ಳುವುದರಲ್ಲಿ. ಹೀಗಾಗಿಯೇ ಪುಸ್ತಕ ಓದುವಾಗ ದಾಸ್ತೊವಸ್ಕಿಯ 'ಕ್ರೈಂ ಅಂಡ್ ಪನಿಶ್‌ಮೆಂಟ್' ಒಳಗೊಂಡಂತೆ ವೈಕಮರ 'ಚಿನ್ನದ ಶಿಲುಬೆ' ಮಾಸ್ತಿಯವರ 'ಇಲ್ಲಿಯ ನ್ಯಾಯ' ಸೇಡಿಯಾಪು ಅವರ 'ನಾಗರಬೆತ್ತ' ದೇವನೂರರ 'ಒಡಲಾಳ' ಮೊದಲಾದ ಕಥೆ ಕಾದಂಬರಿಗಳು ನೆನಪಾಗುತ್ತವೆ. ಕನ್ನಡದ ಮೊದಲ ಕಾದಂಬರಿಯಾದ 'ಇಂದಿರಾಬಾಯಿ' (1899) ಹಿಡಿದು ಇಡೀ ಆಧುನಿಕ ಕನ್ನಡದ ಬಹುತೇಕ ಕಥನ ಸಾಹಿತ್ಯ




ಫಿಕ್ಷನ್ ಅಪರಾಧ ಮತ್ತು ಶಿಕ್ಷೆಯ ಆಶಯದಿಂದ ಕೂಡಿದೆ. ಪೋಲಿಸು ಮತ್ತು ನ್ಯಾಯಾಲಯಗಳು ಬೇರೆ ಆಗಿವೆ ಅಷ್ಟೆ.

ಲೇಖಕರು ಈ ದಿಸೆಯಲ್ಲಿ ಮಾಡುವ ಚಿಂತನೆಯನ್ನು ಗಮನಿಸಬೇಕು. ಮನುಷ್ಯರ ದುರಂತಗಳನ್ನು ನೈತಿಕ ಸರಿತಪ್ಪುಗಳ ಹಂಗಿಲ್ಲದೆ ಆಕ್ರೋಶವಿಲ್ಲದೆ ನಿರೂಪಿಸುವ ಕಡೆ ಚಿಂತನೆ ಆಳವನ್ನು ಪಡೆಯುತ್ತದೆ. ಲೇಖಕರು ತಮ್ಮ ಅನುಭವ ಮತ್ತು ಚಿಂತನೆಯನ್ನು ಹೇಳಲು ಮ್ಯಾಗೇರಿಯವರು ರೂಪಿಸಿಕೊಂಡಿರುವ ಕಥನಕ್ರಮವೂ ವಿಶಿಷ್ಟವಾಗಿದೆ. ಆಪ್ತವಾದ ಸಂವಹನಶೀಲವಾದ ಕನ್ನಡವಿದೆ. ಕೆಲವೊಂದು ರೂಪಕಗಳು ಭಾವನೆಯನ್ನು ಎದೆಗೆ ತಾಕುವಂತೆ ಬಳಕೆಯಾಗಿವೆ. "ಕುಖ್ಯಾತರು ಪ್ರಖ್ಯಾತರು ಒಂದೆ ಕೋಣೆಯಲ್ಲಿ ಕುಳಿತು ಕಣ್ಣರೆಪ್ಪೆಯಲ್ಲಿ ಗೂಡುಕಟ್ಟಿಕೊಂಡಿರುವ ಶೋಕತಪ್ತ ನೆನಪುಗಳನ್ನು ಮೆಲುಕು ಹಾಕುತ್ತ, ಒಬ್ಬೊಬ್ಬರ ಕಥೆಗೆ ಮತ್ತೊಂದು ಕಥೆಯನ್ನು ಕಟ್ಟಿ ಸಣ್ಣದಾದ ಒಂದು ಹುಸಿನಗೆಯನ್ನು ಹೊರಹಾಕುವರು" ಎಂಬಂತಹ ವಾಕ್ಯಗಳಿವೆ. ಆದರೆ ಕೆಲವು ಲೇಖನಗಳು ಅನಗತ್ಯವಾಗಿ ವಾಚಾಳಿಯಾಗಿವೆ. ನೈತಿಕ ಬೋಧೆಯನ್ನು ಒಳಗೊಂಡಿವೆ.

ಕನ್ನಡದಲ್ಲಿ ಜೈಲುಗಳಲ್ಲಿ ಇದ್ದುಬಂದ ಹೋರಾಟಗಾರರ ಅನೇಕ ಕಥನಗಳಿವೆ. ಆದರೆ ಕೊಲೆ ಕಳ್ಳತನ ಮೋಸ ಮಾಡಿ ಶಿಕ್ಷೆ ಅನುಭವಿಸಿ ಬಂದವ 'ಅಪರಾಧಿ'ಗಳ ಅನುಭವ ಕಥನಗಳಿಲ್ಲ. ಹೀಗಾಗಿ ಎಷ್ಟೇ ಸಹಾನುಭೂತಿ ಉಳ್ಳದ್ದಾದರೂ, ಇಲ್ಲಿನ ಜೈಲಿನೊಳಗಿನ ಜಗತ್ತು ಹೊರಗಿನ ಕಣ್ಣಿಂದ, ಅಧಿಕಾರಸ್ಥ ನೆಲೆಯಿಂದ ಮೂಡಿದ್ದು. ಒಂದೊಮ್ಮೆ 'ಅಪರಾಧಿ'ಗಳಾಗಿದ್ದವರೆ ಹೊರಬಂದು ತಮ್ಮ ಕಥನ ಹೇಳುವುದಾದರೆ ಅದರ ಅನುಭವ ಸಂವೇದನೆ ಹೇಗಿರಬಲ್ಲುದು? ಜೈಲಿನಲ್ಲಿ ಮನಪರಿವರ್ತನೆ ಆದ ಬಳಿಕವೂ ಸಮಾಜ ಅವರನ್ನು ಹೇಗೆ ಸ್ವೀಕರಿಸಿತು. ಅವರ ಬಾಕಿ ಬಾಳು ಹೇಗೆ ಮುಂದುವರೆಯಿತು? ಅಪರಾಧಿಗಳೆಂದು ನ್ಯಾಯಾಲಯದಿಂದ ಘೋಷಿತವಾದವರಿಗಿಂತ ನಾಗರಿಕ ಎಂದುಕೊಂಡಿರುವ ಸಮಾಜ ಹೆಚ್ಚು ಅಪರಾಧ ಮಾಡುತ್ತಿದ್ದು, ಅದು ಅಮಾನುಷವಾಗಿದೆ; ಜೈಲುವ್ಯವಸ್ಥೆ ಇನ್ನೂ ಭೀಕರವಾಗಿದೆ ಎಂದೆಲ್ಲ ಅದು ಹೇಳಬಹುದೇ?

ಕನ್ನಡ ಸಾಹಿತ್ಯಕ್ಕೆ ಬೇರೆಬೇರೆ ಕ್ಷೇತ್ರದ ಅನುಭವ ಚಿಂತನೆ ಭಾಷೆ ಸಂವೇದನೆಗಳ ಒಳಹರಿವು ಕಡಿಮೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಅನುಭವ ಮತ್ತು ಚಿಂತನೆಗಳನ್ನು ಗಮನಿಸಬೇಕು. ಸೆರೆಮನೆ ಸುಧಾರಣೆಯ ಚಿಂತನೆ ಮತ್ತು ಪ್ರಯೋಗಗಳನ್ನು ಗಮನಿಸಬೇಕು. ಮನುಷ್ಯರ ಬಗ್ಗೆ ಪ್ರೀತಿ ಜೀವನದ ಬಗ್ಗೆ ಕಾಳಜಿ, ನೊಂದವರ ಬಗ್ಗೆ ಮೈತ್ರಿಯಿಲ್ಲದೆ ಇಂತಹ ಬರೆಹ ಮತ್ತು ಕ್ರಿಯಾಶೀಲತೆ ಹುಟ್ಟದು.

## ಲಕ್ಷ್ಮಣ್ ಸವದಿಗೆ ಸದ್ಯದಲ್ಲೇ ಒಳ್ಳೆ ಭವಿಷ್ಯ ಇದೆ : ಸಿಎಂ



**ಹಂಪಿ ಟೈಮ್ಸ್ ಬೆಂಗಳೂರು**

1500 ಕೋಟಿ ವೆಚ್ಚದ ಬೃಹತ್ ಏತ ನೀರಾವರಿ ಯೋಜನೆಯನ್ನು ಬೆಳಗಾವಿ ಜಿಲ್ಲೆಗೆ ಕೊಡುವ ಮೂಲಕ ಲಕ್ಷ್ಮಣ ಸವದಿ ಅವರಿಗೆ ಕೊಟ್ಟ ಭರವಸೆ ಈಡೇರಿಸಿದ್ದೇವೆ. ನಮ್ಮ ಕಾಂಗ್ರೆಸ್ ಸರ್ಕಾರ ಈ ಬೃಹತ್ ಯೋಜನೆಯನ್ನು ಬೆಳಗಾವಿ ಜಿಲ್ಲೆಗೆ ನೀಡಿದ್ದನ್ನು ಮರೆಯಲಾಗದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೊಟ್ಟಲಗಿಯ (ಅಮ್ಮಾಜೇಶ್ವರಿ) ಏತ ನೀರಾವರಿ ಯೋಜನೆಯನ್ನು ಉದ್ಘಾಟಿಸಿ ಮಾತನಾಡಿದರು.

ಈ ಯೋಜನೆಯಿಂದ ಎರಡು ರೀತಿಯ ಲಾಭ ಆಗಲಿದೆ. ಮೊದಲಿಗೆ ಒಣ ಭೂಮಿ ಇರುವ ಜಮೀನುಗಳಿಗೆ ನೀರು ಒದಗುತ್ತದೆ. ಎರಡನೆಯದಾಗಿ ಕೆರೆಗಳಿಗೆ ನೀರು ತುಂಬಿಸುವುದರಿಂದ ಅಂತರ್ಜಲ ಅಭಿವೃದ್ಧಿ ಕೂಡ ಆಗುತ್ತದೆ ಎಂದು ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳ ಉದಾಹರಣೆಗಳನ್ನು ನೀಡಿ ವಿವರಿಸಿದರು.

ಕೇಂದ್ರದ ಹಾಲಿ ಸರ್ಕಾರ ಮತ್ತು ರಾಜ್ಯದಲ್ಲಿ ಈ ಹಿಂದೆ ಇದ್ದ ಃಏಕ ಸರ್ಕಾರ ರಾಜ್ಯದ ಯಾವ ನೀರಾವರಿ ಯೋಜನೆಗಳಿಗೂ ಬೆಂಬಲ ನೀಡಲಿಲ್ಲ. ಕೃಷ್ಣ ಮೇಲ್ದಂಡೆ, ಮಹದಾಯಿ, ಭದ್ರಾ ಮೇಲ್ದಂಡೆ, ಮೇಕೆದಾಟು ಯೋಜನೆಗಳಿಗೆ ಕೇಂದ್ರ ಒಂಚೂರು ಸಹಕಾರ ನೀಡುತ್ತಿಲ್ಲ. ಬೆಳಗಾವಿಯಲ್ಲಿ ಗೆದ್ದಿರುವ ಇಬ್ಬರು ಸಂಸದರು ಸೇರಿ ಬಿಜೆಪಿಯ ಒಬ್ಬೇ ಒಬ್ಬ ಸಂಸದ ಪಾರ್ಲಿಮೆಂಟಲ್ಲಿ ಧ್ವನಿ ಎತ್ತಲಿಲ್ಲ. ಇದು ಬೆಳಗಾವಿ ಜನತೆಗೆ, ರಾಜ್ಯದ ಜನತೆಗೆ ಬಿಜೆಪಿ ಸಂಸದರು ಬಗೆದ ದ್ರೋಹ ಅಲ್ಲವೇ ಎಂದು ಸಿಎಂ ಖಾರವಾಗಿ ಪ್ರಶ್ನಿಸಿದರು.

ನೀರಾವರಿ ಯೋಜನೆಗಳ ಬಗ್ಗೆಯೂ ಈ ಸಂಸದರು ಬಾಯಿಯನ್ನೇ ಬಿಡಲಿಲ್ಲ, ರಾಜ್ಯಕ್ಕೆ ಆರ್ಥಿಕವಾಗಿ ವಂಚಿಸುತ್ತಿರುವ ಬಗ್ಗೆಯೂ ತುಟಿ ಬಿಡದ ಈ ಸಂಸದರಿಗೆ ನೀವು ಕೊಟ್ಟ ಓಟಿಗೆ ಏನು ಗೌರವ ಬಂತು ಹೇಳಿ. ಃಏಕ ಇವತ್ತಿನವರೆಗೂ ನುಡಿದಂತೆ ನಡೆದ ಒಂದೇ ಒಂದು ಉದಾಹರಣೆ ಇದೆಯಾ ನೀವೇ ವಿಚಾರ ಮಾಡಿ. ಕಾಂಗ್ರೆಸ್ ಸರ್ಕಾರ, ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡು ನೀವು ಕೊಟ್ಟ ಓಟಿಗೆ ಗೌರವ ಕೊಟ್ಟಿದ್ದೇವೆ. ಹೌದೋ ಇಲ್ಲವೋ ಎದೆ ಮುಟ್ಟಿಕೊಂಡು ಕೇಳಿಕೊಳ್ಳಿ ಎಂದು ಸಿಎಂ ಕರೆ ನೀಡಿದರು.

## ಗ್ಯಾರಂಟಿಗಳ ಮಾಹಿತಿಯುಕ್ತ ವಸ್ತು ಪ್ರದರ್ಶನ ಅಚ್ಚುಕಟ್ಟಾಗಿದೆ ಎಂದ ಶಾಸಕಿ ಎಂ.ಪಿ.ಲತಾ

**ಹಂಪಿ ಟೈಮ್ಸ್ ಹೊಸಪೇಟೆ**

ಹರಪನಹಳ್ಳಿಯ ಶಾಸಕರಾದ ಎಂ.ಪಿ ಲತಾ ಮಲ್ಲಿಕಾರ್ಜುನ ಅವರು ಮಾರ್ಚ 06ರಂದು ಹೊಸಪೇಟೆ ನಗರಕ್ಕೆ ಆಗಮಿಸಿ ವಾರ್ತಾ ಇಲಾಖೆಯ ವಸ್ತು ಪ್ರದರ್ಶನದ ವೀಕ್ಷಣೆ ನಡೆಸಿದರು.

ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ ಮಾರ್ಚ 4ರಿಂದ ಆಯೋಜಿಸಿದ್ದ ವಸ್ತು ಪ್ರದರ್ಶನ ವೀಕ್ಷಣೆ ಬಳಿಕ ಮಾತನಾಡಿದ ಶಾಸಕರು, ಸರ್ಕಾರದ ಯೋಜನೆಗಳ ಅನುಕೂಲತೆಯು ಸಮಾಜದಲ್ಲಿನ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ಈ ನಿಟ್ಟಿನಲ್ಲಿ ಹೊಸಪೇಟೆ ಬಸ್ ನಿಲ್ದಾಣದಲ್ಲಿ ಆಯೊಜಿಸಲಾಗಿರುವ ವಸ್ತು ಪ್ರದರ್ಶನದಲ್ಲಿನ ಪ್ರಚಾರ ಫಲಕಗಳು ಮಾಹಿತಿ ಪೂರ್ಣವಾಗಿವೆ ಎಂದರು. ವಾರ್ತಾ ಇಲಾಖೆಯು ಆಯೋಜನೆ ಮಾಡಿರುವ ಕಾರ್ಯಕ್ರಮ ಅಚ್ಚುಕಟ್ಟಾಗಿದೆ ಎಂದು ತಿಳಿಸಿದರು.

ಈ ರೀತಿಯ ವಸ್ತು ಪ್ರದರ್ಶನ ಮಳಿಗೆಗಳು ತಾಲೂಕು ಕೇಂದ್ರದಲ್ಲಿ ಸಹ ಆಗಬೇಕು. ಅಂದಾಗ ಅಲ್ಲಿನ ಜನರಿಗು ಸಹ ಮಾಹಿತಿ ದೊರೆಯುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಮಾತನಾಡಿ, ಅನ್ನಭಾಗ್ಯ, ಗೃಹ ಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಮತ್ತು ಯುವನಿಧಿ ಗ್ಯಾರಂಟಿ ಯೋಜನೆಗಳ ಬಗ್ಗೆ ಅರಿವು ಮೂಡಿಸಲು ವಾರ್ತಾ ಇಲಾಖೆಯು ಆಯೋಜನೆ ಮಾಡಿರುವ ವಸ್ತು ಪ್ರದರ್ಶನ ಕಾರ್ಯಕ್ರಮವು ಜನಪಯೋಗಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹೊಸಪೇಟೆ ವಿಭಾಗದ ವಿಭಾಗೀಯ ಸಂಚಾರ ಅಧಿಕಾರಿಗಳಾದ ಆರ್.ಪಿ. ವಾಜಂತ್ರಿ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ವಾರ್ತಾ ಇಲಾಖೆಯ ಪ್ರಥಮ ದರ್ಜೆ ಸಹಾಯಕರಾದ ಕೆ.ರಾಮಾಂಜನೇಯ, ವಿಭಾಗೀಯ ನಿಯಂತ್ರಣಾಧಿಕಾರಿಯ ಆಪ್ತ ಸಹಾಯಕರಾದ ಜೆ.ಪ್ರಕಾಶ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.






**ಹೊಸಪೇಟೆ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿರುವ ವಾರ್ತಾ ಇಲಾಖೆಯ ವಸ್ತು ಪ್ರದರ್ಶನ ಮಳಿಗೆಗೆ ಶಾಸಕಿ ಎಂ.ಪಿ.ಲತಾ, ಡಿಸಿ ಎಂ.ಎಸ್.ದಿವಾಕರ ಭೇಟಿ ನೀಡಿ ವೀಕ್ಷಿಸಿದರು.**

ಕವಿ ಮನಸು

## ಕಣಕಣದಲ್ಲಿ ಬೆರೆತಿರುವೆ



ಕಣಕಣದಲ್ಲಿಯು ಬೆರೆತಿಹ ಪ್ರೇಯಸಿ
ತನುಮನ ನಿನ್ನನೆ ಆಶಿಸಿದೆ
ಸನಿಹಕೆ ಬಂದರೆ ದೂರಕೆ ಸರಿಯುವೆ
ಇನಿಯನ ಕಾಡುವೆ ಇದು ಸರಿಯೆ?

ನಗುವಿನ ಮೊಗದಲಿ ಗಲ್ಲದ ಈ ಗುಳಿ
ಕಚಗುಳಿ ಇಡುತಿದೆ ಮುಂಗುರಳು
ತಾರೆಯ ಹೊಳಪಿನ ಸುಂದರ ಕಣ್ಗಳು
ಕಾಡುತಲಿರುವುದು ಹಗಲಿರುಳು

ನೆನಪಿನ ಹಕ್ಕಿಗೆ ಸರಪಳಿ ಬಿಗಿಯುತ
ಮನಸಿನ ಗೂಡಲಿ ಬಂಧಿಸಿದೆ
ಕನಸನು ಕಾಣಲು ಆಸ್ಪದೆ ಎಲ್ಲಿದೆ?
ಮನವಿದು ವಿರಹದಿ ನಿದ್ರಿಸದೆ

ಒಲವಿನ ಬೇಡಿಕೆ ಇರಿಸಿದೆ ನಿನ್ನಲಿ
ಒಲ್ಲೆನು ಎನ್ನದೆ ಬಳಿ ಬಾರೆ
ಬಲ್ಲೆನು ನಿನ್ನಲಿ ಅವಿತಿಹ ಪ್ರೇಮವ
ಬದುಕಲಿ ಸಂಭ್ರಮ ನೀ ತಾರೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

07–03–2024 – ಗುರುವಾರ

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತಾರಾಷಾಡ |
| ಯೋಗ | : ವರಿಯಾಣ |
| ಕರಣ | : ಕೌಳವ |
| ಸೂರ್ಯೋದಯ | : 06:44:13 |
| ಸೂರ್ಯಾಸ್ತ | : 18:31:43 |
| ರಾಹು | : 14:06–15:35 |
| ಯಮಘಂಡ | : 06:44–08:13 |
| ಗುಳಿಕ | : 09:41–11:10 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 06–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.02 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 1212 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.010 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1602.74 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8031 ಕ್ಯುಸೆಕ್ |
| ಸಾಮರ್ಥ್ಯ | 25.273 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಒದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಕವಿತೆ ಹುಟ್ಟಿದ ಸಮಯ

**ನಾನು ಬಡವ ಆಕೆ ಬಡವಿ**
**ಒಲವೇ ನಮ್ಮ ಬದುಕು**
**ಬಳಸಿಕೊಂಡೆವದನೆ ನಾವು**
**ಅದಕೂ ಇದಕೂ ಎದಕೂ**


ವರಕವಿ ದ.ರಾ. ಬೇಂದ್ರೆಯವರ ಈ ಕವನ ಅವರ ಜೀವನದ ಕುರಿತು ಬಿತ್ತರವಾದ ಮಹತ್ತರ ಸಾಲುಗಳು. ತಮ್ಮ ಜೀವನದ ಕುರಿತು ಅತಿ ಹೆಚ್ಚು ಕವನಗಳನ್ನು ಬರೆದವರು ದ.ರಾ ಬೇಂದ್ರೆ. ತಮ್ಮ ಅನುಭವಕ್ಕೆ ದಕ್ಕಿದ್ದೆಲ್ಲವನ್ನು ಪಡೆದು ಅನುಭಾವಿಯಾದವರು ಬೇಂದ್ರೆಯವರು.ಇಂತಹ ಹಲವಾರು ಕವನಗಳನ್ನು ಅವರು ಬರೆದದ್ದು ಎಲ್ಲಿ, ಯಾವಾಗ ಎಂಬುದು ಬಲು ಸೋಜಿಗದ ವಿಷಯ.

ಅದು ಸ್ವಾತಂತ್ರ್ಯ ಚಳುವಳಿಯ ಉತ್ತುಂಗದ ಕಾಲ. ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ನಂತರ ಬ್ರಿಟಿಷರನ್ನು ವಿರೋಧಿಸಿ ಹಲವಾರು ಕ್ರಾಂತಿಕಾರಕ ಪ್ರಯತ್ನಗಳು ನಡೆದವು. ಇದೇ ಸಮಯದಲ್ಲಿ ಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು 'ನರಬಲಿ' ಎಂಬ ಶೀರ್ಷಿಕೆಯಲ್ಲಿ ಕವನವನ್ನು ಬರೆದರು.

ಬಲಗಾಲಲ್ಲಿ ಬಿಡುಗಡೆಯನ್ನು ಮೆಟ್ಟಿ ನಿಂತಿಹೆ ಎಲೆ ಕಾಳಿ, ನಿನ್ನೆಡಗಾಲನು ನೆಕ್ಕುತಲಿಹುದು ಶ್ವಾನಸೂಕರಾಳಿ ಎಂದು ಆರಂಭವಾಗುವ ಈ ಕವನದಲ್ಲಿ ಭಾರತ ಮಾತೆಯು ಕಾಳಿಕಾಮಾತೆಯ ಸ್ವರೂಪವನ್ನು ಹೊಂದಿದ್ದು ಆಕೆಯ ಎಡಗಾಲನ್ನು ಬ್ರಿಟಿಷರು ನೆಕ್ಕುತ್ತಿದ್ದಾರೆ ಎಂಬರ್ಥವನ್ನು ಹೊಂದಿತ್ತು.

ದಾಸ್ಯದ ಸಂಕೋಲೆಯಲ್ಲಿ ಸಿಲುಕಿರುವ ಭಾರತ ದೇಶವನ್ನು ರಕ್ಷಿಸಲು ಉಕ್ಕಡಗಾತ್ರದ ಆಕೆಯ ಮಕ್ಕಳು ತಯಾರಾಗಿ ನಿಂತಿರುವರು. ತಾಯಿ ಭಾರತಿಯ ಸ್ವಾತಂತ್ರಕ್ಕಾಗಿ ನರಬಲಿ ಆಗಲೇಬೇಕು ಎಂಬ ಅರ್ಥದ ಕವನವನ್ನು ಬರೆದಿದ್ದರು ವರಕವಿ.

ಈ ಕವನವನ್ನು ಓದಿದ ಬ್ರಿಟಿಷ್ ಅಧಿಕಾರಿ ಇದರ ಭಾವಾನುವಾದವನ್ನು ತನ್ನ ಮೇಲಧಿಕಾರಿಗಳಿಗೆ ಕಳುಹಿಸಿದಾಗ ಅಂದಿನ ಬ್ರಿಟಿಷ್ ಅರಸೊತ್ತಿಗೆಯ ಅಧಿಕಾರಿಗಳು ತಾವು ಓದಿದ ಸರ್ಕಾರಿ ಶಾಲೆ ನಂಬರ್ ಒಂದರಲ್ಲಿ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದ ಬೇಂದ್ರೆ ಅವರಿಗೆ ತಪ್ಪೊಪ್ಪಿಗೆ ಬರೆದುಕೊಡಬೇಕು ಇಲ್ಲವೇ ಕೆಲಸದಿಂದ ವಜಾ ಮಾಡಲಾಗುವುದು ಎಂದು ಬೇಂದ್ರೆಯವರಿಗೆ ನೋಟಿಸ್ ಕಳುಹಿಸಿದರು. ಆದರೆ ಇದಕ್ಕೆ ಬೆದರದ ಬೇಂದ್ರೆಯವರು ನಾನು ಬರೆದದ್ದು ನಿಜವೇ ಇರುವುದರಿಂದ ತಪ್ಪೊಪ್ಪಿಗೆ ಬರೆದು ಕೊಡುವುದಿಲ್ಲ ಎಂದು ಹೇಳಿದರು. ಪರಿಣಾಮವಾಗಿ ಬೇಂದ್ರೆಯವರನ್ನು ಅವರು ಮಾಡುತ್ತಿದ್ದ ಶಿಕ್ಷಕ ಕೆಲಸದಿಂದ ವಜಾ ಮಾಡಿ ಒಂದು ವರ್ಷಗಳ ಕಾಲ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಸೆರೆಯಲ್ಲಿಡಲಾಯಿತು, ಜೊತೆಗೆ ಮುಂದೆ 12 ವರ್ಷಗಳ ಕಾಲ ಅವರಿಗೆ ಯಾವುದೇ ರೀತಿಯ



ಸರ್ಕಾರಿ ಚಾಕರಿಯಲ್ಲಿ ಅವಕಾಶ ಕೊಡದೆ ಇರುವಂತೆ ಆರ್ಡರ್ ಮಾಡಲಾಯಿತು.

ಈ ಸಮಯದಲ್ಲಿ ಅವರಿಗೆ ಸಾಕಷ್ಟು ಜನ ತಪ್ಪೊಪ್ಪಿಗೆ ಪತ್ರ ಬರೆದುಕೊಡಲು ಆಗ್ರಹಿಸಿದರು. ಮತ್ತೆ ಕೆಲವು ಸ್ನೇಹಿತರು ಅವರ ಕೌಟುಂಬಿಕ ಸ್ಥಿತಿ ಅಧೋಗತಿಗಿಳಿಯುತ್ತದೆ ಎಂದು ಕೂಡ ಹೆದರಿಸಿದರು.

ಆದರೆ ಇದಾವುದಕ್ಕೂ ಬಗ್ಗದ ಬೇಂದ್ರೆಯವರು ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟರೆ ನಾನು ಬರೆದ ಕವನ ತಪ್ಪು ಎಂದು ಒಪ್ಪಿಕೊಂಡಂತಾಗುತ್ತದೆ, ಇದು ನಾನು ನನ್ನ ದೇಶಕ್ಕೆ ಮಾಡುವ ದ್ರೋಹವಾಗುತ್ತದೆ. ಇನ್ನು ನನ್ನ ಪತ್ನಿ ಈಗಾಗಲೇ ನನ್ನನ್ನು ಮದುವೆಯಾಗಿ ಸಾಕಷ್ಟು ಬಡತನವನ್ನು ಅನುಭವಿಸಿರುವ ಆಕೆಗೆ ಇನ್ನಷ್ಟು ಬಡತನ ಅಭ್ಯಾಸವಾಗಿಬಿಡುತ್ತದೆ ಆದ್ದರಿಂದ ತಪ್ಪೊಪ್ಪಿಗೆ ಪತ್ರ ಬರೆದು ಕೊಡುವುದಿಲ್ಲ ಎಂದು ಖಡಾ ಖಂಡಿತವಾಗಿ ನಿರಾಕರಿಸಿದರು.

ಅವರು ಮಾಸ್ತರ ಬೇಂದ್ರೆ.... ಸೆರೆಯಲ್ಲಿದ್ದರೇನು!! ಶಾಲೆಯಲ್ಲಿದ್ದರೇನು??. ಸಾಧಾರಣ ಕೈದಿಯಾಗಿದ್ದ ಬೇಂದ್ರೆಯವರು ಅಲ್ಲಿಯೂ ಜೈಲಿನಲ್ಲಿ ಕೈದಿಗಳಿಗೆ ಅಕ್ಷರಾಭ್ಯಾಸ ಮಾಡಿಸುತ್ತಾ, ನೈತಿಕ ಮೌಲ್ಯಗಳನ್ನು ಕಲಿಸುತ್ತಾತಮ್ಮಶಿಕ್ಷಕವೃತ್ತಿಯನ್ನುಮುಂದುವರಿಸಿದರು. ಆದರೆ ಅತ್ಯಂತ ಕೃಶರಾಗಿದ್ದ ಬೇಂದ್ರೆ ಅನಾರೋಗ್ಯಕ್ಕೆ ಈಡಾದರು. ಜನರಿಗೆ ಬೇಕಾಗಿರುವ ವ್ಯಕ್ತಿ ಬೇಂದ್ರೆ ಎಲ್ಲಿ ಸತ್ತು ಹೋಗು ಬಿಡುತ್ತಾರೋ ಎಂಬ ಭಯದಿಂದ ಅವರನ್ನು ಬೆಳಗಾವಿಯ ಹಿಂಡಲಗಾ ಜೈಲಿನಿಂದ ಮುಗದ ಎಂಬ ಊರಿನ ಮನೆಯೊಂದರಲ್ಲಿ ನಜರ ಕೈದಿಯಾಗಿ ಇಡಲಾಯಿತು. ಅತ್ಯಂತ ಸುಂದರ ಪ್ರಕೃತಿ ಸಂಪತ್ತನ್ನು ಹೊಂದಿದ್ದ ಮುಗದ ಎಂಬ ಊರು ಭಾವನಾ ಜೀವಿ ಬೇಂದ್ರೆಯವರಿಗೆ ಅವರ ಬದುಕಿನ ಅತ್ಯುತ್ತಮ ಕವನಗಳನ್ನು ರಚಿಸಲು ಅನುವು ಮಾಡಿ ಕೊಟ್ಟಿತು.

ಹಕ್ಕಿಹಾರಿತು ನೋಡಿದಿರಾ ಹಕ್ಕಿಹಾರಿತು ನೋಡಿದಿರಾ, ನಾನು ಬಡವ ಆಕೆ ಬಡವಿ ಒಲವೇ ನಮ್ಮ ಬದುಕು

**ಪಾತರಗಿತ್ತಿ ಪಕ್ಕ ನೋಡಿದೇನಾ ಅಕ್ಕ**
**ಹಸಿರು ಹಚ್ಚೀ ಚುಚ್ಚಿ ಮೇಲಕ್ಕರಿಸಿನ ಹಚ್ಚಿ**
**ಹೂವಿಗ್ಹೋಗತಾವ ಗಲ್ಲ ತಿವೀತಾವ**

ಮುಂತಾದ ಕವನಗಳು ಹುಟ್ಟಿದ್ದು ಇಲ್ಲಿಯೇ. ಒಂದು ಹೇಳಿಕೆಯಂತೆ ಬೇಂದ್ರೆಯವರ ಗರಿ ಕವನ ಸಂಕಲನದ ಎಲ್ಲ ಕವನಗಳು ಮುಖದ ರಮ್ಯ ಪ್ರಕೃತಿ ತಾಣದಲ್ಲಿ ಸೃಜಿಸಲ್ಪಟ್ಟವು.

ಸ್ನೇಹಿತರೇ ...ರವಿ ಕಾಣದ್ದನ್ನು ಕವಿ ಕಾಣುವನು ಎಂದು ಹೇಳುವುದು ಬಹುಶಃ ಇದಕ್ಕೆ ಇರಬೇಕು. ಹಾಡುವ ಹಕ್ಕಿ ಎಲ್ಲಿದ್ದರೂ ಹಾಡುತ್ತದೆ ಎಂಬುದು ವರ ಕವಿ ಬೇಂದ್ರೆಯಂಥವರನ್ನು ನೋಡಿಯೇ ಹೇಳಿರಬೇಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

# ರೈತ ಬೆಳೆದ ಹಣ್ಣು ನೇರ ಗ್ರಾಹಕರ ಕೈಗೆ

## ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಚಾಲನೆ । ವಿವಿಧ ಬಗೆಯ ಹಣ್ಣುಗಳು, ಅಣಬೆ, ಜೇನು ಪ್ರದರ್ಶನ ಮಾರಾಟ

■ **ಹಂಪಿ ಟೈಮ್ಸ್ ಕೊಪ್ಪಳ**

ಮಹಾ ಶಿವರಾತ್ರಿ ಪ್ರಯುಕ್ತ ತೋಟಗಾರಿಕೆ ಇಲಾಖೆಯಿಂದ ನಗರದಲ್ಲಿ ಮಾರ್ಚ್ 6 ರಿಂದ ಮಾ.9 ರವರೆಗೆ ಹಮ್ಮಿಕೊಳ್ಳಲಾದ ವಿವಿಧ ಬಗೆಯ ಹಣ್ಣುಗಳು, ಅಣಬೆ ಮತ್ತು ಜೇನು ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಬುಧವಾರ ಚಾಲನೆ ಸಿಕ್ಕಿತು.

ಪ್ರತಿ ವರ್ಷ ಒಂದಿಲ್ಲೊಂದು ಕಾರ್ಯಕ್ರಮದ ಮೂಲಕ ಗಮನ ಸೆಳೆದಿರುವ ಕೊಪ್ಪಳ ತೋಟಗಾರಿಕಾ ಇಲಾಖೆಯು, ಈ ಬಾರಿಯೂ ರೈತರಿಂದ ನೇರ ಗ್ರಾಹಕರಿಗೆ ಎಂಬ ಆಶಯದಡಿ ಆಯೋಜಿಸಲಾದ ಹಣ್ಣುಗಳು ಮತ್ತು ಜೇನು ಹಬ್ಬಕ್ಕೆ ತೋಟಗಾರಿಕೆ ಉಪನಿರ್ದೇಶಕರ ಕಚೇರಿ ಆವರಣದಲ್ಲಿ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ರಿಬ್ಬನ್ ಕತ್ತರಿಸುವುದರ ಮೂಲಕ ಚಾಲನೆ ನೀಡಿದರು.

ಬಳಿಕ ಶಾಸಕರು ಜೇನು, ದ್ರಾಕ್ಷಿ, ದಾಳಿಂಬೆ, ಪೇರಲ, ಅಂಜೂರ, ಕಲ್ಲಂಗಡಿ, ಕರಬೂಜ, ಬಾಳೆ, ಪಪ್ಪಾಯ, ಅಣಬೆ ಸೇರಿದಂತೆ ವಿವಿಧ ಬಗೆಯ ಹಣ್ಣುಗಳನ್ನು ಮತ್ತು ಹಾಗೂ ಉತ್ಪನ್ನಗಳನ್ನು ವಿಕ್ಷೀಸಿದರು. ಬಳಿಕ ಹಣ್ಣುಗಳಿಂದ ಅಲಂಕೃತವಾದ ಫೋಟೋ ಪಾಯಿಂಟ್‌ನಲ್ಲಿ ಫೋಟೋ ತೆಗೆಯಿಸಿಕೊಂಡು, ತೋಟಗಾರಿಕೆ ಇಲಾಖೆ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಿಇಓ ಭೇಟಿ: ದ್ರಾಕ್ಷಿ, ದಾಳಿಂಬೆ, ಪೇರಲ, ಅಂಜೂರ, ಕಲ್ಲಂಗಡಿ, ಕರಬೂಜ, ಬಾಳೆ, ಪಪ್ಪಾಯ, ಅಣಬೆ ಮತ್ತು ಜೇನು ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ ಅವರು



ಭೇಟಿ ನೀಡಿ, ಜೇನು, ಅಣಬೆ ಸೇರಿದಂತೆ ವಿವಿಧ ಹಣ್ಣುಗಳನ್ನು ಮತ್ತು ಹಾಗೂ ಉತ್ಪನ್ನಗಳನ್ನು ವಿಕ್ಷೀಸಿ, ಅವುಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಬಳಿಕ ಈ ಮೇಳದ ಕುರಿತು ಸಾಮಾಜಿಕ ಜಾಲತಾಣದ ಮೂಲಕ ಹೆಚ್ಚು ಜಾಗೃತಿ ಮೂಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷರಾದ ಯಂಕಣ್ಣ ಯರಾಶಿ, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್., ಕೊಪ್ಪಳ ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಷ್ಣ ಸಿ ಉಕ್ಕುಂದ ಸೇರಿದಂತೆ ಜಿಲ್ಲಾ ಕೃಷಿಕ ಸಮಾಜ, ವಿವಿಧ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆಗಳ ಅಧ್ಯಕ್ಷರು, ಪ್ರತಿನಿಧಿಗಳು, ಹಲವು ಗಣ್ಯರು ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ಇಲಾಖೆ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಮೇಳದಲ್ಲಿ ಎಲ್ಲಾ ಹಣ್ಣುಗಳು ಹಾಗೂ ಅವುಗಳ ಮೌಲ್ಯವರ್ಧಿತ ಉತ್ಪನ್ನಗಳನ್ನು ಗ್ರಾಹಕರ ಆರೋಗ್ಯ ವೃದ್ಧಿ ದೃಷ್ಟಿಯಿಂದ ಮಾರಾಟ ಮಾಡಲಾಗುತ್ತಿದೆ. ಮೇಳದಲ್ಲಿ ರೈತರಿಗೆ ಉಚಿತವಾಗಿ ಸ್ಟಾಲ್‌ಗಳನ್ನು ಹಾಕಲು ಅವಕಾಶ ಕಲ್ಪಿಸಲಾಗಿದ್ದು, 17ಕ್ಕೂ ಹೆಚ್ಚು ಹಣ್ಣು ಬೆಳೆಗಾರರು, 10 ರೈತ ಉತ್ಪಾದಕ ಕಂಪನಿಗಳಲ್ಲದೇ ಜಿಲ್ಲಾ ಹಾಪಕಾಮ್ಸ್ ಸಂಸ್ಥೆಗಳಿಗೆ ಕೂಡ ಸ್ಟಾಲ್‌ಗಳ ವ್ಯವಸ್ಥೆ ಮಾಡಲಾಗಿದೆ. ರೈತ ಉತ್ಪಾದಕ ಕಂಪನಿಗಳು ಹಾಗೂ ಜಿಲ್ಲಾ ಹಾಪಕಾಮ್ಸ್ ಕೊಪ್ಪಳದ ನೂರಾರು ಸದಸ್ಯ ರೈತರಿಂದ ವಿವಿಧ ಹಣ್ಣುಗಳನ್ನು ಖರೀದಿಸಿ, ಮೇಳದಲ್ಲಿ ಮಾರಾಟ ಮಾಡುವುದರಿಂದ ಈ ಮೇಳದಲ್ಲಿ ನೇರವಾಗಿ ಭಾಗವಹಿಸಿದ ರೈತರಿಗೂ ಅನುಕೂಲವಾಗಿ ಯೋಗ್ಯ ಬೆಲೆ ಸಿಗುವಂತಾಗಲಿದೆ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಷ್ಣ ಸಿ ಉಕ್ಕುಂದ ಅವರು ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಗಮನ ಸೆಳೆದ ಕೃಷಿ ಡ್ರೋನ್: ಕೃಷಿ ಬೆಳೆಗಳಲ್ಲಿ ರಸಾಯನಿಕ ಔಷಧಿಗಳ ಸಿಂಪಡಿಸಲು ಫ್ಲೈಯಿಂಗ್ ವೆಡ್ಜ್ ಡಿಫೆನ್ಸ್ & ಎರೋ ಸ್ಪೇಸ್ ಕಂಪನಿ, ಬೆಂಗಳೂರು ಇವರ ವತಿಯಿಂದ ಸಿದ್ಧಪಡಿಸಲಾದ ಕೃಷಿ ಡ್ರೋನ್ 'ಜೇನು ಮತ್ತು ಹಣ್ಣು' ಮೇಳದಲ್ಲಿ ಗಮನ ಸೆಳೆಯಿತು. ಭಾರತ ಸರ್ಕಾರದ ಮಾನ್ಯತೆ ಪಡೆದ ಹಾಗೂ ಉನ್ನತ ಕೃಷಿ ಸಂಶೋಧನಾ ಕೇಂದ್ರ ಸಂಸ್ಥೆಯಿಂದ ಅಧ್ಯಯನ ಮಾಡಲಾದ ಈ ಕೃಷಿ ಡ್ರೋನ್ ಕೃಷಿಕರಿಗೆ ಶೇ.50ರಷ್ಟು ಹಣ ಉಳಿತಾಯ ಮಾಡಬಹುದು. ರಸಾಯನಿಕ ಔಷಧಿ ಸಿಂಪಡಿಸಲು ಕೆಲಸಗಾರರ ಅವಲಂಭತೆಯನ್ನು ಕಡಿಮೆ ಮಾಡುವುದಲ್ಲದೇ 5 ನಿಮಿಷದಲ್ಲಿ ಒಂದು ಎಕರೆಗೆ ಔಷಧಿ ಸಿಂಪಡಿಸಬಹುದು. ಸಮ ಸಿಂಪಡಣೆಯಿಂದ ಶೇ.20ರಷ್ಟು ಬೆಳೆ ಇಳುವರಿಯನ್ನು ಹೆಚ್ಚಿಸುತ್ತದೆ. ರಸಾಯನಿಕಗಳೊಂದಿಗೆ ನೇರ ಸಂಪರ್ಕದ ಅಪಾಯವನ್ನು ಕಡಿಮೆ ಮಾಡುತ್ತದೆ ಹಾಗೂ ನೀರಿನ ಬಳಕೆಯನ್ನು ಶೇ.90ರಷ್ಟು ಕಡಿಮೆ ಮಾಡುತ್ತದೆ.

ಶಾಸಕರು, ಅಧಿಕಾರಿಗಳಿಗೆ ಮತ್ತು ರೈತರಿಗೆ ಕಂಪನಿಯ ಪ್ರಾದೇಶಿಕ ವ್ಯವಸ್ಥಾಪಕ ಅವಿನಾಶ ಕುಲಕರ್ಣಿ ಅವರು ಕೃಷಿ ಡ್ರೋನ್ ಬಗ್ಗೆ ಮಾಹಿತಿ ನೀಡಿದರು.

# ಕುಡಿಯುವ ನೀರಿಗಾಗಿ ಕಾಲುವೆಗೆ ನೀರು ಹರಿಸಲು ನಿರ್ಧಾರ

■ **ಹಂಪಿ ಟೈಮ್ಸ್ ಕೊಪ್ಪಳ**

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರಾದ ಶಿವರಾಜ ಎಸ್.ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ನಡೆದ 2023–24ನೇ ಸಾಲಿನ 121ನೇ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಧರಿಸಿದಂತೆ ತುಂಗಭದ್ರಾ ಜಲಾಶಯದಲ್ಲಿ ಕುಡಿಯುವ ನೀರಿಗಾಗಿ ಲಭ್ಯವಿರುವ ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಕಾಲುವೆಗಳಿಗೆ ನೀರು ಹರಿಸಲು ನಿರ್ಧರಿಸಲಾಗಿದೆ.

ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಿಗೆ ಗಣೇಕಲ್ ಜಲಾಶಯ ಹಾಗೂ ಇತರೆ ಕೆರೆ ಕಟ್ಟೆಗಳಿಗೆ ಮಾರ್ಚ್ 05 ರಿಂದ ಮಾ.16 ರವರೆಗೆ 1200 ಕ್ಯೂಸೆಕ್ಸ್‌ನಂತೆ ಕುಡಿಯುವ ನೀರು ಹರಿಸಲಾಗುವುದು.

ತುಂಗಭದ್ರಾ ಜಲಾಶಯದಲ್ಲಿ ಲಭ್ಯವಿರುವ ನೀರನ್ನು ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಲು ಅನುವಾಗುವಂತೆ ಕಾಲುವೆಗಳಿಗೆ ಕುಡಿಯುವ ನೀರಿನ ಸಲುವಾಗಿ ಮಾತ್ರ ಹರಿಸಲಾಗುತ್ತಿದ್ದು, ಪ್ರಸಕ್ತ ವರ್ಷ ಜಲಾಶಯದಲ್ಲಿ ನೀರಿನ ಸಂಗ್ರಹಣೆ ಸಾಮರ್ಥ್ಯ ಕಡಿಮೆ ಇರುವುದರಿಂದ ರೈತ ಬಾಂಧವರು ಕಾಲುವೆಯ ಅಂಚಿನಲ್ಲಿ ಓಡಾಡುವುದು, ಕಾಲುವೆಯಿಂದ ನೀರನ್ನು ಬಳಸುವುದನ್ನು ಮತ್ತು ಎತ್ತಿಕೊಳ್ಳುವುದನ್ನು ನಿಷೇಧಗೊಳಿಸಲಾಗಿರುತ್ತದೆ. ಕಾರಣ ರೈತ ಬಾಂಧವರು ಸಮರ್ಪಕ ನೀರು ನಿರ್ವಹಣೆಗೆ ಇಲಾಖೆಯೊಡನೆ ಸಹಕರಿಸಬೇಕು ಎಂದು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿಗಳು ಹಾಗೂ ತುಂಗಭದ್ರಾ ಯೋಜನಾ ವೃತ್ತ ಮುನಿರಾಬಾದ ಹಾಗೂ ತುಂಗಭದ್ರಾ ಯೋಜನೆಯ ಅಧೀಕ್ಷಕ ಅಭಿಯಂತರರಾದ ಎಲ್.ಬಸವರಾಜ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.




ಮೈಕ್ರೋ ನ್ಯೂಸ್

## ಹಂಪಿಯಲ್ಲಿ ಶಿವರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ಮಹಾಶಿವರಾತ್ರಿ ನಿಮಿತ್ತ ಕಡ್ಡಿರಾಂಪುರದ ಶ್ರೀಮರಿದೇವ ಸಂಗೀತ ಸಾಂಸ್ಕೃತಿಕ ಕಲಾವೃಂದವು ಹಂಪಿ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ ಸಹಯೋಗದಲ್ಲಿ ಮಾ.8 ರಂದು ಸಂಜೆ 7ಕ್ಕೆ ಹಂಪಿ ಶ್ರೀವಿರೂಪಾಕ್ಷೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ 26ನೇ ವರ್ಷದ ಭಕ್ತಿಭಾವನ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಕಲಾವೃಂದದ ಸಂಸ್ಥಾಪಕ ಅಧ್ಯಕ್ಷ ಅಂಗಡಿ ವಾಮದೇವ್ ತಿಳಿಸಿದ್ದಾರೆ.

ಶ್ರೀ ಜಗದ್ಗುರು ವಿದ್ಯಾರಣ್ಯ ಸ್ವಾಮೀಜಿಗಳು ಸಾನಿಧ್ಯವಹಿಸುವರು. ಶಾಸಕ ಹೆಚ್.ಆರ್. ಗವಿಯಪ್ಪ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಎಂ. ಎಸ್.ದಿವಾಕರ್, ಭಾಗವಹಿಸಲಿದ್ದಾರೆ. ಹಂಪಿ ಗ್ರಾಮಪಂಚಾಯಿತಿ ಅಧ್ಯಕ್ಷೆ ರಜಿನಿ.ಕೆ. ಷಣ್ಮುಖಗೌಡ ಅಧ್ಯಕ್ಷತೆವಹಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯನಗರ ಜಿಲ್ಲಾ ಸಹಾಯಕ ನಿರ್ದೇಶಕರಾದ ಸಿದ್ದಲಿಂಗೇಶ್ ರಂಗಣ್ಣನವರ್, ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಹನುಮಂತಪ್ಪ ಸೇರಿದಂತೆ ಅಧಿಕಾರಿಗಳು, ಗಣ್ಯರು ಭಾಗವಹಿಸಲಿದ್ದಾರೆ. ಅನೇಕ ಕಲಾವಿದರು, ಭಕ್ತೀಗೀತೆ, ಸುಗಮ ಸಂಗೀತ, ನೃತ್ಯ, ಜಾನಪದ ಗೀತೆ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

## ಶ್ರೀರಾಮಕೃಷ್ಣ ಯಾದವಗಿರಿ ಮೈಸೂರು ಶಾಲೆಗೆ 8ನೇ ತರಗತಿ ಪ್ರವೇಶಕ್ಕಾಗಿ ಗಂಡುಮಕ್ಕಳಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ವಿಜಯನಗರ ಜಿಲ್ಲೆಯ ಪ.ಜಾತಿ/ಪಂಗಡದವರ ಹಾಗೂ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಪೋಷಕರ ಗಂಡುಮಕ್ಕಳಿಗೆ ಶ್ರೀರಾಮಕೃಷ್ಣ ವಿದ್ಯಾಶಾಲಾ ಯಾದವಗಿರಿ ಮೈಸೂರು ಶಾಲೆಯಲ್ಲಿ 8ನೇ ತರಗತಿ ಸೇರಬಯಸುವ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಕಛೇರಿಯಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರವೇಶ ಬಯಸುವ ವಿದ್ಯಾರ್ಥಿಗಳು ಮಾರ್ಚ 6 ರಿಂದ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ/ತಾಲ್ಲೂಕು ಕಛೇರಿಗಳಿಗೆ ಭೇಟಿ ನೀಡಿ ಅರ್ಜಿ ಪಡೆದುಕೊಂಡು ಭರ್ತಿ ಮಾಡಿ ದಾಖಲೆಗಳೊಂದಿಗೆ ಮಾರ್ಚ 20ರ ರೊಳಗಾಗಿ ಕಛೇರಿಗೆ ಸಲ್ಲಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಕರಾದ ಶ್ರೀ ಮಂಜುನಾಥ. ಹೆಚ್. ವಿ ತಿಳಿಸಿದ್ದಾರೆ.

## ಕಂಬೈನ್ಸ್ ಹಾರ್ವೆಸ್ಟರ್ ದರ ನಿಗದಿ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಜಿಲ್ಲೆಯಲ್ಲಿ ಬೆಳೆದ ಹಿಂಗಾರು ಹಂಗಾಮಿನ ರಾಗಿ ಹಾಗೂ ವಿವಿಧ ಬೆಳೆಗಳನ್ನು ಕಟಾವು ಮಾಡಲು ಕಂಬೈನ್ಸ್ ಹಾರ್ವೆಸ್ಟರ್‌ಗಳ ದರ ನಿಗದಿಯಾಗಿರುತ್ತದೆ.

ಜಿಲ್ಲೆಯಲ್ಲಿ ಲಭ್ಯವಿರುವ ಕಂಬೈನ್ಸ್ ಹಾರ್ವೆಸ್ಟರ್ ಯಂತ್ರಗಳೊಂದಿಗೆ ಹೊರ ರಾಜ್ಯದ ಬಹುತೇಕ ಕಂಬೈನ್ಸ್ ಹಾರ್ವೆಸ್ಟರ್ ಯಂತ್ರಗಳಿಂದಲೂ ಸಹ ಬೆಳೆ ಕಟಾವು ಮಾಡಲಾಗುತ್ತಿದೆ. ಖಾಸಗಿ ವಾಹನ ಮಾಲೀಕರು ಪ್ರತಿ ಎಕರೆಗೆ ರೂ. 3500 ರಂತೆ ಕಟಾವು ಮಾಡುತ್ತಿದ್ದಾರೆ. ಪ್ರತಿ 1 ಎಕರೆ ಬೆಳೆಯನ್ನು ಕಂಬೈನ್ಸ್ ಹಾರ್ವೆಸ್ಟರ್ ಯಂತ್ರದ ಮೂಲಕ ಕಟಾವು ಮಾಡಲು ಅಂದಾಜು ರೂ. 2310 ಖರ್ಚು ಬರುತ್ತದೆ ರೈತರಿಗೆ ಅನೂಕೂಲವಾಗುವ ದೃಷ್ಠಿಯಿಂದ ಜಿಲ್ಲೆಯಾದ್ಯಂತ 1 ಎಕರೆ ಬೆಳೆಯನ್ನು ಕಂಬೈನ್ಸ್ ಹಾರ್ವೆಸ್ಟರ್ ಯಂತ್ರದ ಮೂಲಕ ಕಟಾವು ಮಾಡಲು ರೂ. 2500 ನ್ನು ನಿಗದಿಪಡಿಸಲಾಗಿದೆ. ಇಲ್ಲವೇ ಕಂಬೈನ್ಸ್ ಹಾರ್ವೆಸ್ಟರ್ ಮಾಲೀಕರು ನಿಗದಿಪಡಿಸಿದದರದಂತೆಕಾರ್ಯನಿರ್ವಹಿಸಲು ಸೂಚಿಸಿದೆ. ತಪ್ಪಿದಲ್ಲಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಎಂ.ಎಸ್ ಧಿವಾಕರ್ ತಿಳಿಸಿದ್ದಾರೆ.

# ಚುನಾವಣೆಯಲ್ಲಿ ಲೋಪವಾಗದಂತೆ ಕಾರ್ಯನಿರ್ವಹಿಸಿ : ಡಿಸಿ ದಿವಾಕರ

### ನೋಡಲ್ ಅಧಿಕಾರಿಗಳೊಂದಿಗೆ ಸಭೆಯಲ್ಲಿ ಖಡಕ್ ಸೂಚನೆ



**ಹಂಪಿ ಟೈಮ್ಸ್ ಹೊಸಪೇಟೆ**

2024ರ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳಾದ ಎಂ. ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳ ಸಭೆ ನಡೆಯಿತು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ಚುನಾವಣೆ ಸಮಯದಲ್ಲಿ ಯಾವುದೇ ರೀತಿಯ ಲೋಪದೋಷಗಳಿಗೆ ಅವಕಾಶವಿಲ್ಲದ ಹಾಗೆ ಎಲ್ಲಾ ನೋಡಲ್ ಅಧಿಕಾರಿಗಳು ಎಚ್ಚರ ವಹಿಸಿ ಕೆಲಸ ಮಾಡಬೇಕು. ಚುನಾವಣಾ ಆಯೋಗದ ಮಾರ್ಗಸೂಚಿಯನ್ವಯ ಕಾರ್ಯನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಸಲಹೆ ಸೂಚಿಸಿದರು. ಒಟ್ಟು 16 ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿರುತ್ತದೆ. ಎಲ್ಲ ಅಧಿಕಾರಿಗಳು ತಮ್ಮ ತಮ್ಮ ಕರ್ತವ್ಯಗಳ ಬಗ್ಗೆ ಅರಿಯಬೇಕು. ಏನಾದರೂ ಗೊಂದಲಗಳಿದ್ದರೆ ಆ ಬಗ್ಗೆ ತಿಳಿದುಕೊಂಡು ಚುನಾವಣೆಯ ಎಲ್ಲ ಕಾರ್ಯಗಳನ್ನು ಪಾರದರ್ಶಕವಾಗಿ ಮಾಡಬೇಕು. ಅನವಶ್ಯಕ ಗೊಂದಲಗಳಿಗೆ ಅವಕಾಶ ಮಾಡಿಕೊಡಬಾರದು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಅನುರಾಧ ಜಿ. ಮಾತನಾಡಿ, ಬೇರೆ ಬೇರೆ ಕಾರ್ಯಗಳಿಗೆ ನಿಯೋಜನೆಗೊಂಡ ಎಲ್ಲಾ ನೋಡಲ್ ಅಧಿಕಾರಿಗಳು ಯಾವುದೇ ಕೆಲಸವನ್ನು ಮುಂದೂಡದೆ ಕಾಲಮಿತಿಯೊಳಗಡೆ ನಿರ್ವಹಣೆ ಮಾಡಬೇಕು. ಚುನಾವಣೆ ಆಯೋಗದ ಆದೇಶಗಳ ಪಾಲನೆಯಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು.ಬಿ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್ ಉಪಸ್ಥಿತರಿದ್ದರು.

## ಇಂಧನ ಇಲಾಖೆಯಲ್ಲಿ 10 ದಿನ ಆನ್‌ಲೈನ್ ಸೇವೆ ಅಲಭ್ಯ :


■ **ಹಂಪಿ ಟೈಮ್ಸ್ ಹೊಸಪೇಟೆ:** ಇಂಧನ ಇಲಾಖೆ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ ಉನ್ನತಿಕರಣ ನಿಮಿತ್ತ ಮಾರ್ಚ್ 10 ರಿಂದ 19ವರೆಗೆ 10 ದಿನಗಳ ಕಾಲ ರಾಜ್ಯದ ಎಲ್ಲ ಹೆಸ್ಕಾಂಗಳ ಆನ್‌ಲೈನ್ ಸೇವೆಗಳು ನಗರ ಪ್ರದೇಶದ ಗ್ರಾಹಕರಿಗೆ ಲಭ್ಯವಿರುವುದಿಲ್ಲ. ಆನ್‌ಲೈನ್ ಪಾವತಿ ಸೇವೆಗಳು ಲಭ್ಯವಿರುವುದಿಲ್ಲ, ನಗದು ಶಾಖೆಯಲ್ಲಿ ಮ್ಯಾನುವಲ್ ಸೇವೆ ಇರಲಿದೆ. 10 ದಿನಗಳ ಕಾಲ ಗ್ರಾಹಕರು ಸಹಕರಿಸಬೇಕೆಂದು ಹೊಸಪೇಟೆ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು (ವಿ), ತಿಳಿಸಿದ್ದಾರೆ.

# ಶ್ರೀದುರ್ಗಾದೇವಿ ಜಾತ್ರೆ ಮಹೋತ್ಸವ


■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪಟ್ಟಣದ ಅಧಿದೇವತೆ ಶ್ರೀರಾಂಪುರದ ದುರ್ಗಾದೇವಿ ಜಾತ್ರಾಮಹೋತ್ಸವ ಮಂಗಳವಾರ, ಬುಧವಾರ ಎರಡುದಿನಗಳ ಕಾಲ ಶ್ರದ್ಧಾಭಕ್ತಿಗಳಿಂದ ನಡೆಯಿತು.

ಶ್ರೀರಾಂಪುರದ ದುರ್ಗಾದೇವಿ ಜಾತ್ರಾ ಮಹೋತ್ಸವದ ನಿಮಿತ್ತ ಒಂದುವಾರದ ಮುಂಚೆ ಕಾರ್ಯಕ್ರಮಗಳು ಆರಂಭ ಗೊಂಡಿದ್ದು, ಪ್ರತಿವರ್ಷವು ಮಾಘಮಾಸದ ಬಹುಳದತೃತೀಯದಿಂದ ನಮಿಯವರೆಗೆ ದೇವಿಗೆ ಕಂಕಣದಾರಣೆ, ವಿಶೇಷ ಹೂವಿನ ಅಲಂಕಾರ, ಕುಂಕುಮಾರ್ಚನೆ, ಫಲಪುಷ್ಪಸೇವೆ, ಶ್ರೀದೇ ವಿಗೆ ಬುತ್ತಿಪೂಜೆ, ಸಕಲ ಮುತ್ತೈದೆ ಯರಿಂದ ದೇವಿಗೆ ಉಡಿತುಂಬುವುದು, ಗಂಗಾಪೂಜೆ ಹೀಗೆ ವಿವಿಧ ಧಾರ್ಮಿಕ ವಿಧಿವಿಧಾನಗಳು ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ದೇವಿಯ ಪಟವನ್ನು ರುದ್ರನಾಯ್ಕ್ ರವರು 33 ಸಾವಿರರೂ. ಗಳಿಗೆ,ರವಿಕಿರಣ್ ರವರು ದೇವಿಧರಿಸಿದ ಹೂವಿನಹಾರವನ್ನು 6100 ರೂ. ಗಳಿಗೆ ಹರಾಜಿನಲ್ಲಿ ಪಡೆದರು. ಇದಕ್ಕೂ ಮುನ್ನ



ಮರಿಯಮ್ಮನಹಳ್ಳಿ ತಾಂಡದ ಭಕ್ತರು ತಾಶರಾಂಡೋಲ್ ನೊಂದಿಗೆ ಹೆಜ್ಜೆಹಾಕುತ್ತ ಸಾಮೂಹಿಕವಾಗಿ ಮೆರವಣಿಗೆ ಮೂಲಕಬಂದು ದೇವಿಯ ದರ್ಶನಪಡೆಯುವುದು ಜಾತ್ರೆಯ ವಿಶೇಷ. ಬುಧವಾರ ರಾತ್ರಿ 10.30ಕ್ಕೆ ದುರ್ಗಾದೇವಿಯು ಉತ್ಸವದೊಂದಿಗೆ ಡೊಳ್ಳು ವಾದ್ಯಗಳೊಂದಿಗೆ ಗಂಗೆಪೂಜೆಗೆ ತೆರಳಿ ಬರುವುದು. ಆನಂತರ ಅಗ್ನಿಕುಂಡ, ಮಹಾಮಂಗಳಾರತಿ ನಡೆದು ನಂತರ ಸಿಡಿಮದ್ದು ಕಾರ್ಯಕ್ರಮ ನಡೆದು ಸಡಗರದ ಜಾತ್ರೆ ಸಂಪನ್ನಗೊಂಡಿತು.



# ಗ್ರಾಮೀಣ ಪ್ರದೇಶದಲ್ಲಿ ಕ್ರೀಡೆ ಆಯೋಜನೆ ಅಗತ್ಯ

### ಮುಖಂಡ ಆರ್.ರಮೇಶ ಅಭಿಮತ । ಗೆಲುವಿನ ನಗೆಬೀರಿದ ಮಾದೂರು ಸೂಪರ್ ಸ್ಟಾರ್ ಕ್ರಿಕೇಟರ್ಸ್ ತಂಡ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ಮಾದೂರು ಗ್ರಾಮದಲ್ಲಿ ಭಾನುವಾರ ಜರುಗಿದ ಕ್ರಿಕೇಟ್ ಟೂರ್ನಿಯಲ್ಲಿ ಆರ್.ರಮೇಶ ನಾಯಕತ್ವದ ಸೂಪರ್ ಸ್ಟಾರ್ ಕ್ರಿಕೇಟರ್ಸ್ ತಂಡ ಗೆಲವು ಸಾಧಿಸಿ, ಟ್ರೂಫಿ ಮತ್ತು ನಗದು 10 ಸಾವಿರ ಬಹುಮಾನವನ್ನು ತನ್ನದಾಗಿಸಿಕೊಂಡಿತು. ಶಿರಬಿ ಮಲ್ಲಪ್ಪ ನಾಯಕತ್ವದ ರೇಜಿಂಗ್ ಕ್ರಿಕೇಟರ್ಸ್ ತಂಡವು ರನ್ನರ್‌ಅಪ್ ಸ್ಥಾನಗಳಿಸಿ ನಗದು 5000 ಬಹುಮಾನ ಸ್ವೀಕರಿಸಿತು.

ಮಾದೂರು ಗ್ರಾಮದ 6 ತಂಡಗಳು ಟೂರ್ನಿಯಲ್ಲಿ ಭಾಗವಹಿಸಿದ್ದವು. 10 ಓವರ್‌ಗಳ ಆಟದಲ್ಲಿ ವಿಜೇತ ತಂಡ ಆರು ಓವರ್‌ಗಳಲ್ಲೇ ತನ್ನ ಎದುರಾಳಿ ತಂಡ ಗಳಿಸಿದ್ದ



25 ರನ್‌ಗಳನ್ನು ಮೀರಿಸಿ ಗೆಲುವಿನ ನಗೆಬೀರಿತು.

ವಿಜೇತ ತಂಡದ ನಾಯಕ ಆರ್.ರಮೇಶ ಮಾತನಾಡಿ, ಗ್ರಾಮೀಣ ಪ್ರದೇಶಗಲ್ಲೂ ಪ್ರತಿಭಾವಂತ ಕ್ರೀಡಾಪಟುಗಳಿದ್ದಾರೆ. ಆಟಗಳು ಕೇವಲ ನಗರ ತಾಲೂಕು, ಜಿಲ್ಲಾ ಮಟ್ಟಕ್ಕೆ ಸೀಮಿತಗೊಳ್ಳಬಾರದು. ಸರ್ಕಾರದ ಕ್ರೀಡಾ ಇಲಾಖೆ ಗ್ರಾಮೀಣ ಪ್ರದೇಶಗಳಲ್ಲೂ ವಿದ್ಯಾರ್ಥಿಯೇತರ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಿದರೆ ಗ್ರಾಮೀಣ ಪ್ರತಿಭೆ ಹೊರಹೊಮ್ಮಲು ಸಾಧ್ಯವಾಗಲಿದೆ ಎಂದರು.

ಗ್ರಾಮದ ಮುಖಂಡರು ಮತ್ತು ಕ್ರೀಡಾ ಪ್ರೋತ್ಸಾಹಿಗಳಾದ ಈ ಮಲ್ಲಪ್ಪ, ಬಿ.ಎಸ್. ರಮೇಶ, ಮಧ್ಯಾನಸ್ವಾಮಿ, ತೊಗರಿ ಪ್ರಭು ಸೇರಿದಂತೆ ಇತರರು ಇದ್ದರು.

# ಹಂಪಿಯಲ್ಲಿ ಡೆವಲಪ್‌ಮೆಂಟ್ ಆಫ್ ಟ್ರಾವೆಲರ್ ನೂಕ್ಸ್ ಲಾಂಚ್ ಇಂದು

### ಪ್ರಧಾನಿ ನರೇಂದ್ರ ಮೋದಿ ಅವರಿಂದ ವರ್ಚುವಲ್ ಲಾಂಚ್ ಮೂಲಕ ಶಂಕುಸ್ಥಾಪನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಕೇಂದ್ರ ಪುರಸ್ಕೃತ ಸ್ವದೇಶ ದರ್ಶನ್ 2.0 ಯೋಜನೆಯಡಿ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಪ್ರವಾಸೋದ್ಯಮ ಮಂತ್ರಾಲಯ, ಭಾರತ ಸರ್ಕಾರ ಇವರ ಸಹಯೋಗದಲ್ಲಿ ಹಂಪಿಯ ವಿವಿಧ ಪರಿಸರದಲ್ಲಿ "ಡೆವಲಪ್‌ಮೆಂಟ್ ಆಫ್ ಟ್ರಾವೆಲ್ಲರ್ ನೂಕ್ಸ್" ಹಂಪಿ ಯೋಜನೆಯ ಶಂಕುಸ್ಥಾಪನೆಯ ವರ್ಚುವಲ್ ಲಾಂಚ್ ನೇರಪ್ರಸಾರ ಕಾರ್ಯಕ್ರಮ ಮಾ.7 ರಂದು ಬೆಳಿಗ್ಗೆ 10.30 ಗಂಟೆಗೆ ಹಂಪಿಯ ವಿರೂಪಾಕ್ಷೇಶ್ವರ ದೇವಸ್ಥಾನ ಎದುರುಗಡೆ ಹಮ್ಮಿಕೊಳ್ಳಾಗಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಭಾರತ ಸರ್ಕಾರ ವರ್ಚುವಲ್ ಲಾಂಚ್ ಮೂಲಕ ಶಂಕುಸ್ಥಾಪನೆ ನೆರವೇರಿಸುವರು. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ. ಜೆಡ್. ಜಮೀರ್ ಅಹ್ಮದ್ ಖಾನ್ ಉದ್ಘಾಟಿಸುವರು. ಗದಗ ಜಿಲ್ಲಾ ಉಸ್ತುವಾರಿ ಸಚಿವ ಹೆಚ್. ಕೆ. ಪಾಟೀಲ್ ಉಪಸ್ಥಿತರಿರುವರು. ಶಾಸಕ ಹೆಚ್. ಆರ್. ಗವಿಯಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

## ಮಾ.11ರೊಳಗೆ ಆಕ್ಷೇಪಣೆ ಸಲ್ಲಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ರಾಷ್ಟೀಯ ಆರೋಗ್ಯ ಅಭಿಯಾನ ಯೋಜನೆ ಮತ್ತು ನಗರ ಆರೋಗ್ಯ ಅಭಿಯಾನ ಯೋಜನೆಯಡಿಯಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅದರನ್ವಯ ಆರ್.ಬಿ.ಎಸ್.ಕೆ ವೈದ್ಯಾಧಿಕಾರಿಗಳು (ಎಸ್.ಟಿ–ಬ್ಲಾಕ್ ಲಾಗ್)., ಬಯೋ ಮೆಡಿಕಲ್ ಎಂಜಿನೀಯರ್, ಆರ್.ಕೆ.ಎಸ್.ಕೆ ಆಪ್ತ ಸಮಾಲೋಚಕರು, ಆಪ್ತ ಸಮಾಲೋಚಕರು ಆರ್.ಎಮ್.ಎನ್.ಸಿ.ಹೆಚ್ ಹುದ್ದೆಗಳ ನೇಮಕಾತಿಯ ತಾತ್ಕಾಲಿಕ ಆಯ್ಕೆಪಟ್ಟಿ ಹಾಗೂ ಕಾಯ್ದಿರಿಸಿದ ಆಯ್ಕೆಪಟ್ಟಿಗಳನ್ನು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಯ ಸೂಚನೆಯ ಫಲಕದಲ್ಲಿ ಪ್ರಕಟಿಸಿದೆ. ಇದ್ದಕ್ಕೆ ಸಂಬಂಧಿಸಿದ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಂದ ಮಾರ್ಚ 11ರ ಸಂಜೆ 5.30ರೊಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಉಪಾಧ್ಯಕ್ಷರು ತಿಳಿಸಿದ್ದಾರೆ.




ಬೇಕಾಗಿದ್ದಾರೆ

ಪಾರ್ಟ್ ಟೈಮ್ / ಫುಲ್ ಟೈಮ್ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ

ಕುಶಾಲ್ ಟೆಲಿ ಮೊಬೈಲ್ಸ್

Wholesale Dealers in All Brands second hand Mobiles

ರಾಮಾ ಟಾಕೀಸ್ ಹತ್ತಿರ, ಭಾರತ್ ಪೆಟ್ರೋಲ್ ಬಂಕ್ ಎದುರುಗಡೆ, ಹೊಸಪೇಟೆ–583201

M:99029 00085




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA